

ಕಲ್ಯಾಣ ಕಿರಣ

ಜನವರಿ-2014 ಬೆಲೆ: 20





ಬೀದರನಲ್ಲಿ ಲಿಂಗಾಯತ ಧರ್ಮದ ಮಾನ್ಯತೆಗಾಗಿ ಆಗ್ರಹಿಸಿ ನಡೆದ ರ್‍ಯಾಲಿಯಲ್ಲಿ ಜಿಲ್ಲಾಧಿಕಾರಿ ಡಾ॥ ಪಿ.ಸಿ. ಜಾಫರ್ ಅವರ ಉಪಸ್ಥಿತಿಯಲ್ಲಿ ಪೂಜ್ಯ ಮಾತಾಜಿಯವರು ಭಾಷಣ ಮಾಡುತ್ತಿರುವುದು



ಬೀದರ ಜಿಲ್ಲಾಧಿಕಾರಿ ಡಾ॥ ಪಿ. ಸಿ. ಜಾಫರ್ ಅವರಿಗೆ ಮುಖ್ಯ ಮಂತ್ರಿಗಳಿಗೆ ರವಾನಿಸಬೇಕಾದ ಮನವಿಯನ್ನು ಕೊಡುತ್ತಿರುವುದು

ಹೊಸ ವರ್ಷದ ಶುಭಾಶಯಗಳೊಡನೆ

ಬಸವಾತ್ಮಜೆಯ ಕರೆ

ಶರಣು ಶರಣಾರ್ಥಿ ಶರಣರೆ ಶರಣು ಶರಣಾರ್ಥಿ
ಶರಣು ಶರಣಾರ್ಥಿ ನಿಮಗೆ ಶರಣು ಶರಣಾರ್ಥಿ ॥ಪ॥

ಬನ್ನಿರಿ ಶರಣರೆ ಬನ್ನಿರಿ ಬೇಗನೆ
ಬಸವ ಮಹಾಮನೆ ಕಟ್ಟುವ ಬನ್ನಿ
ಶರಣರ ಆಶಯ ಪೂರೈಸ ಬನ್ನಿ
ಶರಣರ ಋಣವನು ತೀರಿಸ ಬನ್ನಿ ॥1॥

ಅಂದು ಕಲ್ಯಾಣದಿ ಕ್ರಾಂತಿಯು ಘಟಿಸೆ
ತಂದೆಯು ಪಡೆದರು ಗಡಿಯ ಪಾರನು
ವಚನ ವಾಙ್ಮಯವ ಹೊತ್ತ ಶರಣರು
ಹರಣವ ತೆತ್ತು ಕಾಪಿಟ್ಟರದನು ॥2॥

ತಂದೆ ತಾಯಿಯ ಆಸರೆ ತಪ್ಪಲು
ಲಿಂಗಾಯತ ಗಣವು ಅನಾಥವಾಯಿತು
ಅತ್ತಿತ್ತಲೆಯುತ ಸೋತು ಬಳಲುತಿರೆ
ಮತ್ತೆ ಸಿಕ್ಕಿದೆ ಶರಣ ಪರಂಪರೆ ॥3॥

ವೀರಶೈವರು, ವೈದಿಕ ಮತಿಗಳು
ತಂದು ತುಂಬಿಹ ಕಸವನು ಗುಡಿಸುವಾ
ಧೂರ್ತ ಸ್ವಾರ್ಥಿಗಳ ಸಂಚನು ಅರಿತು
ಮತಿವಂತರ ಸಂಘಟನೆಯ ಮಾಡುವ ॥4॥

ಲಿಂಗಾಯತವು ಸ್ವತಂತ್ರ ಧರ್ಮ
ಗುರು ಬಸವಣ್ಣನೆ ಆತ್ಮವೆಂದರಿತು
ತನು ಮನ ಧನವ ಸವೆಸುತಲೀಗ
ಬಸವ ಸಂದೇಶವ ಸಾರುವ ಬನ್ನಿ ॥5॥

ದಿಟ್ಟ ಹೆಜ್ಜೆಗಳ ಹಾಕುವ ಬನ್ನಿ
ನಿಷ್ಠೆಯ ಛಲವ ತಾಳುವೆವೆನ್ನಿ
ಶರಣ ಸಮಾಜವ ಕಟ್ಟುವ ಬನ್ನಿ
ಬಸವಾತ್ಮಜೆಯ ಬಿನ್ನಹವಿದುವು ॥6॥

ಶರಣ ಮೇಳದಲ್ಲಿ ಬಿಡುಗಡೆಯಾಗಲಿರುವ ಪುಸ್ತಕ ಹಾಗೂ ಧ್ವನಿ ಸುರಳಿಗಳು

1. ಬಸವ ವಚನಾಮೃತ – ಗುರುಬಸವಣ್ಣನವರ 1009 ವಚನಗಳು, ವ್ಯಾಖ್ಯಾನ ಸಹಿತವಾಗಿ 1ನೆಯ ಆವೃತ್ತಿ. ಬೆಲೆ 120.ರೂ.ಗಳು. ಸಂಪಾದಕರು – ಮಾತಾಜಿ.
2. ಧ್ವನಿ ಸುರಳಿಗಳು: 1. ಶರಣಾಮೃತ,2. ಬಸವ ಗೀತೆ

ಸಂಪುಟ-45 ಬಸವ ಶಕೆ -880 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-01 ಜನವರಿ-2014 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ



ಕಲ್ಯಾಣ ಕಿರಣದ ಓದುಗರಿಗೆ
2014ಹೊಸ ವರ್ಷದ ಶುಭಾಷಯಗಳು

ಕಡೂರಿನಲ್ಲಿ ಗುರು ಸಿದ್ಧರಾಮೇಶ್ವರರ 841ನೆಯ ಜಯಂತಿ ಉತ್ಸವ
ದಿನಾಂಕ – 14-01-14 ಮತ್ತು 15-01-2014,
ಸಹಸ್ರಾರು ಸಂಖ್ಯೆಯಲ್ಲಿ ಶರಣ ಬಂಧುಗಳು
ಭಾಗವಹಿಸಬೇಕೆಂದು ವಿನಂತಿ
ಭುಜೇಂದ್ರ ಬೆಳಕೆರೆ – 9844551414

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com



ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಇಪ್ಪತ್ತೇಳನೆಯ ಶರಣ ಮೇಳ

2014ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೇಳನೆಯ ಶರಣ ಮೇಳವು 2014ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 10,000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು :3000 ರೂ.
2. ಪೋಷಕರು : 8000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 1500 ರೂ.
3. ದಾನಿಗಳು: 5000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 500 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10,000/20,000 ರೂಪಾಯಿಗಳ ಪುದುವಟ್ಟು (F.D)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ. ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮ ಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು

Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105

Sharana Mela Utsava Samithi, (Canara Bank, Bangalore) SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.

ಸಂಪರ್ಕಿಸುವ ವಿಳಾಸಗಳು

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 9448046554/9880768555

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೆ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು- ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರು ಮನೆಯಲ್ಲಿ ಆಗಾಗ ಸೇರುವುದು ಗೊತ್ತು. ತಾಯಿ -ತಂದೆ, ಅಕ್ಕ -ತಂಗಿ, ಅಣ್ಣ -ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃ ಹೃದಯಿಯಾದ ನನ್ನ ಇಚ್ಛೆಯೂ ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ -ಸೋದರತ್ವ - ಸ್ವಾತಂತ್ರ್ಯ ಇವು ನನ್ನ ತತ್ವದ ಮುಖ್ಯ ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ, ಒಂದೊಂದು ಕಾಲದಲ್ಲಿ ಒಬ್ಬೊಬ್ಬರು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲಾ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ - ಸ್ಥಿತಿ -ಲಯ - ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯ ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲಾ ಧರ್ಮಗಳ ಏಕವೇವ ಧ್ಯೇಯವು ಸೃಷ್ಟಿಕರ್ತ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವೋಪಾಸನೆ ಮುಂತಾದವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣ ವ್ಯವಸ್ಥೆ ಜಾತಿ ಪದ್ಧತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನ ದೇವರು- ಧರ್ಮ- ಸಂಸ್ಕಾರ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೆ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂಬೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣ ಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು, ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ, ನೀವು ಸಂಸ್ಕಾರವನ್ನು ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ವ ಸಂಹಿತೆ ಯಾವುದೇ ಒಂದು ಜಾತಿ, ವರ್ಣಕ್ಕೆ ಸೀಮಿತವಾಗದ "ಗಣ ಧರ್ಮ"ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು. ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆವುದಲ್ಲದೆ ಎಲ್ಲರಲ್ಲೂ ಧರ್ಮ ಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆ ಮಂದಿಯೆಲ್ಲ ಕುಳಿತು ಸಂಜೆಯ ಪ್ರಾರ್ಥನೆ-ನೆನಹು ಮಾಡಿರಿ.

ಶರಣ ಸಂಗಮ–ವಾರದ ಪ್ರಾರ್ಥನೆ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವ ಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ನೆನಹು : ಪ್ರತಿದಿನ ಸಂಜೆ 7 ಗಂಟೆಗೆ ಸರಿಯಾಗಿ ನೀವು ಎಲ್ಲೇ ಇದ್ದರೂ ಆ ಸ್ಥಳದಲ್ಲಿ 15 ನಿಮಿಷದವರೆಗೆ ಪ್ರಾರ್ಥನೆಯನ್ನು ವೈಯಕ್ತಿಕವಾಗಿ ಆಗಲಿ, ಸಾಮೂಹಿಕವಾಗಿ ಆಗಲಿ, ಅಳವಡಿಸಿ ಕೊಂಡು ತಪ್ಪದೇ ಮಾಡಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಸಮೂಹವನ್ನು ತೊರೆದವನು ವಿಕೃತ ಮನಸ್ಸಿನವನಾಗುವನು. ಆಯಾ ಊರುಗಳಲ್ಲಿ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ- ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನದಲ್ಲಿ ಧರ್ಮಬಾಂಧವರೆಲ್ಲರೂ ಸೇರಿ ಗಣಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು, ಕುಟುಂಬದವರೆಲ್ಲರು ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. ಗಣಮೇಳವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲಾ ಸೀಮೆದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ 11ರಿಂದ 15ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಯ್ಯ, ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ -ಮಧುವಯ್ಯ- ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದಡೆ ಸೇರಿ ಹಾಡಿ ಪಾಡಿ ನಲಿಯ ಬೇಕೆಂದು ತಾನೇ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು. ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು. ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ ಒಗೆತನವ ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ. ತನು-ಮನ-ಧನ-ಪ್ರಾಣ-ಅಭಿಮಾನ- ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ -ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಿಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಅದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಲಿರುತ್ತಾಳೆ. ಬನ್ನಿ, ನಿಮ್ಮ ಹೃದಯ -ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ -ನಿಮ್ಮೆಲ್ಲರ ತಂದೆಯಾದ ಲಿಂಗದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯ ಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ - ಬಸವಣ್ಣ
(ಗ್ರಹಿಸಿದವರು -ಬಸವಾತ್ಮಜೆ ಮಾತಾಜಿ)

ವೈಶಿಷ್ಟ್ಯಗಳ ಸಂಗಮ: ಶರಣ ಮೇಳ

– ಕರಿಬಸಪ್ಪ ಕೋರಿಶೆಟ್ಟರ್

"ನವ ವರ್ಷಾರಂಭದಲ್ಲಿ ಪ್ರತಿಯೊಬ್ಬ ಬಸವ ಭಕ್ತರ ಹೃದಯದಲ್ಲಿ ಅಣುರಣಿಸುವ ಪದ "ಶರಣ ಮೇಳ". ಸಡಗರ ಸಂಭ್ರಮಗಳಿಂದ ನವದಂಪತಿಗಳಿಂದ ಮೊದಲುಗೊಂಡು ಅಬಾಲವೃದ್ಧರಾದಿಯಾಗಿ ಸಮಾವೇಶಗೊಂಡು ಪುನೀತರಾಗುವ, ಬದುಕಿಗೆ ನವಚೈತನ್ಯ ಹೊಂದುವ ಸಂಜೀವಿನಿಯೇ "ಶರಣ ಮೇಳ".

ಸಿಖ್ ಧರ್ಮೀಯರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯಾ, ಮಹಮ್ಮದೀಯರಿಗೆ ಮೆಕ್ಕಾ, ಕ್ರೈಸ್ತರಿಗೆ ಜೆರೋಸಲಂ ಸಾಂಪ್ರದಾಯಿಕ ಹಿಂದೂಗಳಿಗೆ ಕಾಶಿ ಶ್ರದ್ಧಾಕೇಂದ್ರಗಳಾದಂತೆ ಲಿಂಗಾಯತ ಧರ್ಮೀಯರಿಗೆ ಕೂಡಲ ಸಂಗಮೇ ಶ್ರದ್ಧಾಕೇಂದ್ರ ಇದುವೇ ಧರ್ಮಕ್ಷೇತ್ರ ಇಂಥ ಪವಿತ್ರ ಭೂಮಿಯಲ್ಲಿ ಪರಸ್ಪರ ಭಕ್ತಿ ಸಂಬಂಧದಿಂದ ಸಮಾವೇಶಗೊಂಡು ಐದು ದಿನಗಳವರೆಗೆ ನಲಿಯುವ ಇಂಥ ಮಹೋತ್ಸವದಲ್ಲಿ ಪಾಲ್ಗೊಂಡಾಗಲೇ ಜನ್ಮಸಾರ್ಥಕವಾಗುವ ಅನುಭವ.

ಜನವರಿ 11ರಿಂದ 15ರವರೆಗೆ ಕೃಷ್ಣಾ–ಮಲಪ್ರಭಾ ನದಿಗಳ ಸಂಗಮವಾದ ಕೂಡಲ ಸಂಗಮದಲ್ಲಿ ಹಮ್ಮಿಕೊಳ್ಳುವ ಶರಣ ಮೇಳ ವಿವಿಧ ವೈಶಿಷ್ಟ್ಯಗಳ ಸಂಗಮ. ಬಸವ ಧರ್ಮ ಪೀಠದ ಆವರಣದಲ್ಲಿ ಸಮಾವೇಶಗೊಳ್ಳುವ ಲಕ್ಷಾಂತರ– ಶರಣ ಶರಣೆಯರು ಒಂದಡೆಕುಳಿತು ಭಕ್ತಿ–ಭಾವದಿಂದ ಮಾಡುವ ಸಮುದಾಯ ಪ್ರಾರ್ಥನೆಯ ಆ ದೈವೀ ದೃಶ್ಯವನ್ನು ದರ್ಶಿಸಲು ಎರಡು ಕಣ್ಣುಗಳೂ ಸಾಲದೇನೋ ಅನ್ನಿಸುತ್ತದೆ.

ಯಾವುದೇ ಧರ್ಮ ಸುಗಮವಾಗಿ ಸಾಗಲು ಅದಕ್ಕೆ ಧರ್ಮಗುರುವಿನ ಮೇಲೆ ಭಕ್ತಿ–ಧರ್ಮಗ್ರಂಥದ ಮೇಲೆ ನಿಷ್ಠೆ ಅತ್ಯಗತ್ಯ. ಮೊಹಮ್ಮದ್ ಪೈಗಂಬರ್ ಮೇಲೆ ಭಕ್ತಿ – ಕುರಾನ್ ಮೇಲೆ ನಿಷ್ಠೆ, ಮುಸ್ಲಿಂ ಧರ್ಮದ ಸಂಘಟನೆ ಮತ್ತು ಬೆಳವಣಿಗೆಗೆ ಕಾರಣವಾಗಿದೆ. ಹಾಗೆಯೇ ಗೌತಮಬುದ್ಧನ ಮೇಲೆ ಶ್ರದ್ಧೆ ಯೇಸುಕ್ರಿಸ್ತನ ಮೇಲೆ ಭಕ್ತಿ–ಬೈಬಲ್ ಮೇಲೆ ನಿಷ್ಠೆ. ಗುರುನಾನಕ್ ಮೇಲೆ ಭಕ್ತಿ–ಗ್ರಂಥ ಸಾಹೇಬ್ ಮೇಲೆ ನಿಷ್ಠೆಯಿಂದ ಸಿಖ್ ಧರ್ಮಗಳು ಸಂಘಟನೆ–ಸಂಸ್ಕಾರ ಹೊಂದಿವೆ. ಆದರೆ ಧರ್ಮಗುರು ಬಸವಣ್ಣನವರ ಮೇಲೆ ಭಕ್ತಿ–ಧರ್ಮ ಗ್ರಂಥ ವಚನ ಸಾಹಿತ್ಯದ ಮೇಲೆ ಶ್ರದ್ಧೆ ಮೂಡಿದಾಗಲೇ ಲಿಂಗಾಯತ ಧರ್ಮದ ಸರ್ವಾಂಗೀಣ ಪ್ರಗತಿ ಸಾಧ್ಯವೆಂದು ಮನಗಂಡ ಲಿಂಗೈಕ್ಯ ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರು 1988ರಿಂದ ಪ್ರಾರಂಭಿಸಿದ ಈ ಮಹೋತ್ಸವ ಪೂಜ್ಯ ಮಾತಾಜಿಯವರ ಕರ್ಣಧಾರತ್ವದಲ್ಲಿ ರಜತೋತ್ಸವ ಆಚರಿಸಿ 27ನೇ ವರ್ಷದತ್ತ ದಾಪುಗಾಲು ಇಡುತ್ತಲಿದೆ.

ಪೂಜ್ಯ ಮಾತಾಜಿಯವರ ಕಲ್ಪನೆಯ ಆರೈಕೆಯ ಸಂಘಟನೆಯಾದ ನಿಷ್ಠಾವಂತ–ತತ್ವನಿಷ್ಠ ಶರಣ –ಶರಣೆಯರ ಒಕ್ಕೂಟವಾದ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರ ಅವಿಶ್ರಾಂತ ಪರಿಶ್ರಮದ ಫಲವಾಗಿ ಏರ್ಪಾಡಾಗುವ ಶರಣ ಮೇಳ ಬೇರೆ ರೀತಿಯ ಸಮಾವೇಶಗಳಿಂದ ವಿಭಿನ್ನವಾದದು, ವೈಶಿಷ್ಟ್ಯವಾದುದು. ಗುರು ಬಸವ ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಜಂಗಮ, ಬಣಜಿಗ, ಪಂಚಮಸಾಲಿ, ಸಾಧು, ನೊಳಂಬ ಇವೇ ಮುಂತಾದ ಒಳಪಂಗಡಗಳ ರುದ್ರನರ್ತನ, ವೈಭವೀಕರಣಗಳೇ ಅಧಿಕವಾಗಿರುವ ಇಂದಿನ ಕಲುಷಿತ ವಾತಾವರಣದಲ್ಲಿ ಯಾವುದೇ ಒಳಪಂಗಡಗಳ ಭೇದವಿಲ್ಲದೇ ಎಲ್ಲರೂ ಸಮಾವೇಶಗಳ್ಳುವ ಮೂಲಕ ಅಖಂಡ ಸಮಾಜ ಕಟ್ಟುವ ಕೈಂಕರ್ಯ ಮಾಡುತ್ತಿರುವುದು ಈ ಶರಣ ಮೇಳ.

ಸಾಮಾನ್ಯವಾಗಿ ಜಾತ್ರೆ, ಉತ್ಸವ, ಪುಣ್ಯಾರಾಧನೆಯಂತಹ ಕಾರ್ಯಕ್ರಮಗಳಲ್ಲಿ

ಆಯಾ ಪ್ರದೇಶದ ಜನರೇ ಸಮಾವೇಶಗೊಂಡು ಚದುರುವುದೇ ಹೆಚ್ಚು. ಆದರೆ 5 ರಾಜ್ಯ ಜನರು ಒಂದೇ ಕಡೆ ಸೇರಿ ಸಂಭ್ರಮಿಸುವ ಆ ಮೂಲಕ ಕನ್ನಡ, ಮರಾಠಿ, ತೆಲಗು, ತಮಿಳು ಹೀಗೆ ಭಾಷಾ ಭೇದ ಮರೆತು ಒಂದಾಗಿ ಕೂಡಲ ಸಂಗಮದಲ್ಲಿ ಐದು ದಿನಗಳವರೆಗೆ "ಪುಟ್ಟಭಾರತ" ನಿರ್ಮಾಣ ಮಾಡುವುದೇ ಈ ಶರಣ ಮೇಳ.

ರಾಜಕೀಯ ನೇತಾರರ ರ್‍ಯಾಲಿಗಳಲ್ಲಿ ತಲೆಗೆ 300–400 ಕೊಟ್ಟು ಲಾರಿ–ಬಸ್–ಟ್ರೇನ್‌ಗಳಲ್ಲಿ ಜನರನ್ನು ಸೇರಿಸಿ ಅರ್ಥವಿಲ್ಲದ ಭಾಷಣ ಕೇಳಿಸುವ ಸಮಾವೇಶಗಳಂತೆ ಅಲ್ಲ. ಬದಲಾಗಿ ತಾವೇ ಪ್ರತಿನಿಧಿ ಶುಲ್ಕ ಭರಿಸಿ ಗುರುಕಾಣಿಕೆ ಸಲ್ಲಿಸಿ, ತನು–ಮನ ಮುಟ್ಟಿ ಧರ್ಮಗುರುವಿನ ಸೇವೆ ಸಲ್ಲಿಸಿ ಕೃತಾರ್ಥರಾಗುವ ನಿಷ್ಠಾವಂತರ ಸಂಗಮವೇ ಶರಣ ಮೇಳ.

ಸರ್ಕಾರದಿಂದ ಕೋಟ್ಯಾಂತರ ಅನುದಾನ ಪಡೆದು ಸಂಸ್ಕೃತಿಯ ಸೋಗಿನಲ್ಲಿ ಕೀಳು ಅಭಿರುಚಿಯ ಕಾರ್ಯಕ್ರಮಗಳನ್ನು ನಡೆಸಿ ದುಂದು ವೆಚ್ಚ ಮಾಡುವ "ಸಮ್ಮೇಳನ"ಗಳನ್ನೇ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರದಿಂದ ಒಂದೇ ಒಂದು ರೂಪಾಯಿ ಅನುದಾನ ಪಡೆಯದೇ ಪ್ರತಿಯೊಬ್ಬ ಬಸವ ಭಕ್ತ ಬೆವರಿನ ಹನಿಯಿಂದ ಕಾಯಕದ ಪ್ರತಿಫಲವಾಗಿ ಗಳಿಸಿದ ಲಿಂಗಾರ್ಪಿತ ಸೊಮ್ಮಿನಿಂದ ಹಮ್ಮಿಕೊಳ್ಳುವ ಪರಿಶುದ್ಧ ಉತ್ಸವವೇ ಶರಣಮೇಳ. ಸೆಲೆಬ್ರಿಟಿಗಳನ್ನು, ನಟನಟಿಯರನ್ನು ಕರೆಸಿ ಜನರನ್ನು ಸೆಳೆಯುವ ಸಮಾವೇಶಗಳ ಮಧ್ಯೆ ಅತಿಥಿಗಳು ಮುಖ್ಯಮಂತ್ರಿಯೇ ಇರಲಿ, ಇನ್ನಾವುದೇ ಗಣ್ಯರೇ ಇರಲಿ ಅವರನ್ನು ಲೆಕ್ಕಿಸದೇ ನಮಗೆ ಪೂಜ್ಯ ಮಾತಾಜಿಯವರ ಪ್ರವಚನ ಸುಧೆ ಆರಿಸುವರೇ ಮುಖ್ಯ ಎಂದು ಅನನ್ಯ ಗುರು ಭಕ್ತಿಯ ಸಂಸ್ಕಾರವಂತರ ಸಮಾವೇಶವೇ ಶರಣಮೇಳ.

ಎಷ್ಟೇ ದೂರದವರಿದ್ದರೂ ಪರಸ್ಪರ ಅಣ್ಣ ತಮ್ಮ, ಅಕ್ಕ–ತಂಗಿಯರಂತೆ ಬೆರೆತು ಶ್ರೀಮಂತ–ಬಡವ ಭೇದವಿಲ್ಲದೇ ಧರ್ಮಕ್ಷೇತ್ರದಲ್ಲಿ 5 ದಿನಗಳವರೆಗೆ ಸೇರಿ ಹಾಡಿ–ಪಾಡಿ, ನಕ್ಕು–ನಲಿದು ಬದುಕಿಗೆ ನವಚೈತನ್ಯ ಪಡೆಯುವ ಸದಾಕಾಯಕ ಶೀಲರ ಸಮ್ಮಿಲನವೇ ಈ ಶರಣ ಮೇಳ.

ಹೀಗೆ ವಿವಿಧ ವೈಶಿಷ್ಟ್ಯಗಳಿಂದ ಕೂಡಿದ ಈ ಉತ್ಸವ ಬಸವ ಭಕ್ತರ– ಲಿಂಗಾಯತ ಧರ್ಮೀಯರ ಬಾಳಿನ ಚೈತನ್ಯದಾಯಿನಿ. ಬನ್ನಿ ಶರಣ ಮೇಳಕ್ಕೆ ಹಾಡಿ–ಪಾಡಿ–ನಕ್ಕು ನಲಿದು ಧರ್ಮಗುರುವಿನ ದಿವ್ಯಾನುಗ್ರಹ ಪಡೆದು ಹೊಸಬೆಳಕು ಪಡೆಯೋಣ.

ರಾಷ್ಟ್ರೀಯ ಬಸವ ದಳದ ಸದಸ್ಯತ್ವ

ಸಂಘಟನೆಯ ದೃಷ್ಟಿಯಿಂದ ರಾಷ್ಟ್ರೀಯ ಬಸವ ದಳದ ಕೇಂದ್ರ ಸಂಸ್ಥೆಯು ಸದಸ್ಯತ್ವದ ಅರ್ಜಿ ಪಡೆಯುತ್ತಿದೆ. ಶುಲ್ಕ ಕೇವಲ 50 ರೂಪಾಯಿಗಳು. ಸಂಸ್ಥೆಯ ವತಿಯಿಂದ ಆಗಬಹುದು ಅಥವಾ ವೈಯಕ್ತಿಕ ಸದಸ್ಯತ್ವವೂ ಆಗಬಹುದು. ಅರ್ಜಿಯಲ್ಲಿ ವಿಳಾಸ ಮತ್ತು ದೂರವಾಣಿ (ಮೊಬೈಲ್) ಸಂಖ್ಯೆ ಇರುವುದರಿಂದ ಸಂಪರ್ಕಿಸಲು ಅನುಕೂಲವಾಗುತ್ತದೆ. ಪ್ರತಿಯೊಬ್ಬರೂ ಶರಣ ಮೇಳಕ್ಕೆ ಬಂದಾಗ ಈ ಸದಸ್ಯತ್ವ ಪಡೆಯಲು ಯತ್ನಿಸಿರಿ.

ಕಲ್ಯಾಣ ಕಿರಣಕ್ಕೆ ಸದಸ್ಯರಾಗಿರಿ

ಗುರು ಬಸವಣ್ಣನವರ ವಚನಗಳ ವ್ಯಾಖ್ಯಾನ, ಪ್ರೌಢ ಸಂಪಾದಕೀಯ, ಉತ್ಕೃಷ್ಟ ಲೇಖನಗಳಿಂದ ಕೂಡಿ 1970ನೇ ಇಸವಿಯಿಂದಲೂ ಸತತವಾಗಿ ಪ್ರಕಟವಾಗುತ್ತಿರುವ ಕಲ್ಯಾಣ ಕಿರಣ ಮಾಸಪತ್ರಿಕೆಗೆ ಚಂದಾದಾರರಾಗಿರಿ. ವಾರ್ಷಿಕ ಚಂದಾ 200ರೂ. ಐದು ವರ್ಷದ ಚಂದಾ 1000 ರೂ. ಆಜೀವ ಸದಸ್ಯತ್ವ ಇರುವುದಿಲ್ಲ.

ಅಕ್ಕನ ಯೋಗಾಂಗ ತ್ರಿವಿಧಿ - (ವಿಶ್ಲೇಷಣೆ)

- ಪೂಜ್ಯ ಶ್ರೀ ಜಗದ್ಗುರು
ಬಸವ ಕುಮಾರ ಸ್ವಾಮೀಜಿ

ಯೋಗ = ಯಜ್ ಅನ್ನುವ ಧಾತುವಿನಿಂದ ಕೂಡಿದ್ದು ಕೂಡುವ-ಒಂದಾಗು-ಐಕ್ಯಹೊಂದು
ಅಂಗ = ಯೋಗ ಹೊಂದುವ ಬಗೆಗಳು
ತ್ರಿವಿಧ = ಮೂರು ನಿಯಮಗಳು, ಮೂರು ಪದ್ಧತಿಗಳು, ಮೂರು ಮಾತುಗಳು
ತ್ರಿವಿಧಿ = ಕಾಯಾ-ವಾಚಾ-ಮನಸಾ

ಜೀವಾತ್ಮನ ಮೂಲ ಸ್ಥಾನವಾದ ಪರಮಾತ್ಮನಲ್ಲಿ ಪರಶಿವ ತತ್ವದಲ್ಲಿ ಒಡವೆರೆದು ಒಂದಾಗುವುದು. ಶಾಂತ ಸ್ಥಿತಿಯಲ್ಲಿದ್ದು ಭೌತಿಕ ಪ್ರಪಂಚದಲ್ಲಿ ಇದ್ದೂ ಇಲ್ಲದಂತಿದ್ದು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ ಕ್ರಿಯೆಯನ್ನು ಆಚರಿಸಿ ನಿರ್ಲಿಪ್ತವಾಗಿರುವ ಮಾರ್ಗದರ್ಶನ ಈ ಯೋಗಾಂಗ ತ್ರಿವಿಧಿಯಲ್ಲಿದೆ.

****

" ಶ್ರೀ ಮಹಾಮಹಿಮನೆ ಸೋಮ ಶೇಖರ ಗುರುವೆ
ಕಾಮಿತ ಫಲವ ಕೊಡು ಕಂಡಾ। ಎನ್ನ ಹೃ
ದ್ಧಾಮದೊಳ್ ನಿಂದು ಮೆರೆಕಂಡಾ॥ ॥ 1 ॥

ಗುರು ಬ್ರಹ್ಮ ಗುರು ವಿಷ್ಣು ಗುರುದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ ಎಂಬ ಶ್ಲೋಕದಂತೆ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣೀಕರ್ತನಾದ ದೇವನೇ ಶಕ್ತಿಯನ್ನು ಪಡೆದುಕೊಂಡು ಈ ಭೂಮಿಯ ಮೇಲೆ ಮಾನವ ಆಕಾರದಲ್ಲಿ ಸೋಮಶೇಖರ ಅಂದರೆ ಚಂದ್ರನನ್ನು ಮಸ್ತಕದ ಮೇಲೆ ಧರಿಸಿಕೊಂಡಂಥ ಯೋಗಿ ಶಿವನಂತೆ, ಶಾಂತಿ ಕಳೆಯನು ಹೊಂದಿದಂತೆ ಅಧ್ಯಾತ್ಮ ಜ್ಞಾನವನ್ನು ಹೊತ್ತು ನಡೆದಾಡುವ ದೇವಗುರುವೆ ನಾನು ಬಯಸಿದ ಯೋಗದಿಂದ ಪಡೆವ ಫಲಗಳನ್ನು ಅನುಗ್ರಹಿಸು ಎಂದು ಸದಾ ಎನ್ನ ಹೃದಯ ಮಂದಿರದಲ್ಲಿ ನೆಲೆಸಿ ವಿರಾಜಿಸು ಎಂದು ಬೇಡಿಕೊಂಡಿದ್ದಾರೆ.

" ಮೊದಲು ಮಾಡುವೆ ನಾನು ಸದಮಲಗುರುವಿನ
ಚದುರ ಮತಿಗಳನು ಬಲಗೊಂಡು। ತತ್ವದ
ಪದಗಳನಾಂತು ಮುದದಿಂದ ॥ 2 ॥

ಪ್ರಪ್ರಥಮವಾಗಿ ಸತ್ಯವಾದ (ಪಾಪ)ರಹಿತವಾದ ಅಂದರೆ ಕಾರ್ಮಿಕಮಲ, ಮಾಯಾ ಮಲ, ಆಣವ ಮಲ- ತಂದೆಯಿಂದ ತಾಯಿಯಿಂದ ಹಾಗೂ ಇವೆರಡರ ಮಿಶ್ರಣದಿಂದ ಬಂದಿರುವುದನ್ನು ಮುಮ್ಮಲ ಜಾತ ಅನ್ನುತ್ತಾರೆ. ಇವನ್ನು ಕಳೆದುಕೊಳ್ಳಲು ದೀಕ್ಷೆ ಪಡೆದಾಗ ಸ್ಥೂಲ-ಸೂಕ್ಷ್ಮ-ಕಾರಣ ಶರೀರಗಳಿಗೆ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳನ್ನು ಆಯತ, ಸ್ವಾಯತ, ಸನ್ನಿಹಿತದಿಂದ ಕರ, ಮನ, ಭಾವಗಳಿಗೆ ವೇಧಿಸಿಕೊಂಡ ಗುರುವಿಗೆ ಶರಣೆಂದು ತೀಕ್ಷ್ಣವಾದ ಬುದ್ಧಿಯಿಂದ ಪ್ರಬಲ ಗೊಂಡು ನಿಜ ತತ್ವದಿಂದ ಒಡಗೂಡಿದ ಪದಗಳನ್ನು ಪ್ರಸನ್ನ ಚಿತ್ತವಾಗಿ ಬರೆಯುವೆನು.

" ಜೀವ ಪರಮರ ಭೇದ ಭಾವವನರಿವೊಡೆ
ಆವಾವ ಮುಖದೊಳಿರುತಿಹುದೊ। ಎನ್ನನು
ಭಾವಕ್ಕೆ ಬಂದುದನೊರೆವೆನು ।

(ಮುಂದುವರಿಯುವುದು..)

ಗುರು ಯಾರು ?

-ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ

ಗುರು ಯಾರು? ಅಂತ ಕೇಳಿದ ತಕ್ಷಣ ಉತ್ತರಿಸುವುದು ಅಷ್ಟೊಂದು ಸುಲಭವಾದ ಮಾತಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಗುರುಗಳಿದ್ದೆ ಇರುತ್ತಾರೆ. ಒಂದೊಂದು ಕ್ಷೇತ್ರಕ್ಕೆ ಒಬ್ಬೊಬ್ಬ ಗುರುಗಳು. ಪುಟ್ಟ ಮಗುವಿಗೆ ಮನೆಯೇ ಪಾಠಶಾಲೆ. ಜನನಿಯೇ ಮೊದಲ ಗುರು ಎಂಬ ಮಾತಿತ್ತು. ಆದರೆ ಅದು ಇಂದು ಮಹಾನಗರಗಳಲ್ಲಿ ಹುಸಿಯಾಗುತ್ತಿದೆ. ಅಮ್ಮ ಎಂದು ಕರೆಯಲಿಕ್ಕೂ ಪೂರ್ವದಲ್ಲಿಯೇ ಬೇಬಿ ಸಿಟ್ಟಿಂಗ್ ಪ್ಲೇ ಹೋಮ್‌ಗಳಲ್ಲಿ ಸೇರಿಸಲಾಗುತ್ತಿದೆ. ಆಯ್.ಟಿ.ಬಿ.ಟಿಗಳ ಇಂದಿನ ಯುಗದಲ್ಲಿ ತಂದೆ-ತಾಯಿಗಳಿಬ್ಬರೂ ಯಂತ್ರಗಳಂತೆ ದುಡಿಯುವರು. ಇದು ಇಂದಿನ ಅನಿವಾರ್ಯತೆ ಕೂಡ. ಇಂತಹ ಸಂದರ್ಭದಲ್ಲಿ ಮಕ್ಕಳಿಗೆ ತಾಯಿ-ತಂದೆಗಳ ವಾತ್ಸಲ್ಯವಾಗಲಿ, ಪ್ರೀತಿ-ಮಮತೆಯಾಗಲಿ ಸಿಗುವುದು ಕನಸಿನ ಮಾತೇ ಸರಿ.

ಯಾವುದಾದರೂ ಒಂದು ಕ್ಷೇತ್ರದಲ್ಲಿ ವ್ಯಕ್ತಿಯು ಪರಿಪೂರ್ಣತೆ ಪಡೆಯಬೇಕಾದರೆ, ಆ ವಿಷಯದಲ್ಲಿ ಪರಿಣತಿ ಹೊಂದಿರುವ ಅಥವಾ ಅನುಭವ ಪಡೆದುಕೊಂಡಿರುವ ಇನ್ನೊಬ್ಬ ವ್ಯಕ್ತಿಯ ಮಾರ್ಗದರ್ಶನ ಅಗತ್ಯವಿರುತ್ತದೆ. ಹೀಗೆ ಮಾರ್ಗದರ್ಶನ ಮಾಡುವ ವ್ಯಕ್ತಿಯನ್ನು ಸಾಮಾನ್ಯವಾಗಿ ಗುರು ಎಂದು ಕರೆಯಲಾಗುತ್ತದೆ. ಉದಾ: ಒಬ್ಬ ಹಿರಿಯ ಮೆಕಾನಿಕ್ ಅನೇಕ ಜನ ಕಿರಿಯರಿಗೆ ವಿದ್ಯೆಯನ್ನು ಕಲಿಸಿ ತಾನು ಗುರು ಅಥವಾ ಉಸ್ತಾದ್ ಎನಿಸಿಕೊಂಡಿರುತ್ತಾನೆ. ಹೀಗೆ ಆಯಾ ಕ್ಷೇತ್ರಕ್ಕೆ ಬೇರೆ ಬೇರೆ ಗುರುಗಳು ಅಥವಾ ಮಾರ್ಗದರ್ಶಕರು ಇರುತ್ತಾರೆ.

ಧಾರ್ಮಿಕ ಕ್ಷೇತ್ರದಲ್ಲಿ ಗುರುವಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. 'ಗುರು' ಪದಕ್ಕೆ ವಿಶೇಷ ಅರ್ಥವಿದೆ. ಸಾಮಾನ್ಯವಾಗಿ ದೀಕ್ಷಾಗುರು, ಶಿಕ್ಷಾಗುರು ಮತ್ತು ಮೋಕ್ಷಗುರು ಎಂದು ವರ್ಗೀಕರಿಸಲಾಗಿದೆ. ಧಾರ್ಮಿಕ ವಿಧಿವಿಧಾನದ ಪ್ರಕಾರ ಶಿಷ್ಯನಿಗೆ ಅನುಗ್ರಹ ನೀಡಿದ ಗುರುವಿಗೆ ದೀಕ್ಷಾಗುರು ಎಂದು ಕರೆಯಲಾಗುತ್ತದೆ. ಅವರವರ ಮತ-ಪಂಥ ಧರ್ಮಗಳ ವಿಧಿ-ವಿಧಾನ ಬೇರೆಯೇ ಆಗಿರುತ್ತದೆ.

ಉದಾ: ಮಹಾರಾಷ್ಟ್ರದಲ್ಲಿ ವಾರಕರಿ ಪಂಥವಿದೆ. ಅದು ವೈಷ್ಣವದ ಒಂದು ಪಂಥ ಮಾತ್ರ, ಅದಕ್ಕೆ ಪ್ರತ್ಯೇಕವಾದ ಧರ್ಮಶಾಸ್ತ್ರ, ದರ್ಶನಶಾಸ್ತ್ರ, ಸಿದ್ಧಾಂತ, ನೀತಿಶಾಸ್ತ್ರ ಯಾವುದೂ ಇಲ್ಲವಾದರೂ, ಪೂಜಿಸುವ ವಿಧಾನವಿದೆ. ಅದರ ಅನುಯಾಯಿಗಳು ತನ್ನದೇ ಆದ ರೀತಿ-ನೀತಿಗಳನ್ನು ರೂಪಿಸಿಕೊಂಡಿದ್ದಾರೆ. ಭಜನೆ ಕೀರ್ತನೆಗಳಲ್ಲಿ ಅನುಭವ ಹೊಂದಿರುವ ಹಿರಿಯ ವ್ಯಕ್ತಿಯನ್ನು ಅಲ್ಲಿ 'ಸಂತ' ಎಂದು ಪರಿಗಣಿಸಲಾಗುತ್ತದೆ. ಆ ಸಂತರು ಇನ್ನುಳಿದ ಹೊಸ ಭಕ್ತರಿಗೆ ದೀಕ್ಷೆಯನ್ನು ನೀಡಿ ವಾರಕರಿ ಪಂಥದ ನಿಯಮಗಳನ್ನು ಪಾಲಿಸುವಂತೆ ಬೋಧನೆ ಮಾಡುತ್ತಾರೆ. ಈ ರೀತಿಯಾಗಿ ಕೆಲವೇ ವರ್ಷಗಳಲ್ಲಿ ವಾರಕರಿ ಪಂಥವು ಮಹಾರಾಷ್ಟ್ರದಲ್ಲಿ ವ್ಯಾಪಕವಾಗಿ ಬೆಳೆದಿದೆ. ವರ್ಷದಲ್ಲಿ ಎರಡುಬಾರಿ ದಿಂಡಿ ಅಂದರೆ ಧ್ವಜವನ್ನು (ಕಂಬ ಸಹಿತವಾಗಿ) ಸಾಮೂಹಿಕವಾಗಿ ತೆಗೆದುಕೊಂಡು ಊರಿನ ಜನರೆಲ್ಲ ಸೇರಿ ಪಾದಯಾತ್ರೆಯ ಮೂಲಕ ಭಜನೆ ಮಾಡುತ್ತ ಶ್ರೀ ಜ್ಞಾನೇಶ್ವರ ಮಹಾರಾಜ ಮತ್ತು ಸಂತ ತುಕಾರಾಮರ ಸ್ಮರಣೆ ಮಾಡುತ್ತ ಪಂಢರಾಪುರಕ್ಕೆ ಹೋಗಿ ಬರುತ್ತಾರೆ. ದೀಕ್ಷೆ ಕೊಟ್ಟವರನ್ನು ತನ್ನ ದೀಕ್ಷಾ ಗುರುವೆಂದು ಭಾವಿಸಿ ಶಿಷ್ಯನು ಅವರಲ್ಲಿ ಅನನ್ಯ ಭಕ್ತಿ- ಶ್ರದ್ಧೆಯನಿಟ್ಟು ನಡೆದುಕೊಳ್ಳುತ್ತಾನೆ.

ಮತ ಪಂಥ ಮತ್ತು ಧರ್ಮಗಳಲ್ಲಿ ಸಾಕಷ್ಟು ಅಂತರವಿದೆ. ಮತ ಅಂದರೆ ಆಲೋಚನಾ ವಿಧಾನ. ಪಂಥ ಅಂದರೆ ಉಪಾಸಿಸುವ ಪದ್ಧತಿ. ಧರ್ಮದ ಅರ್ಥ "ಜೀವನ ಪಥ" ಅಥವಾ ಬದುಕಿನ ದಾರಿ ಎಂದರ್ಥ. ಜೀವನದ ದಾರಿ ಎಂದಾಕ್ಷಣ ಕೇವಲ ಉದರ ಪೋಷಣೆಯ

ವಿದ್ಯೆ ಅಥವಾ ಕುಟುಂಬದ ನಿರ್ವಹಣೆಯ ಕಲೆ ಎಂದರ್ಥವಲ್ಲ. ಮನುಷ್ಯನ ಹುಟ್ಟು-ಸಾವಿನ ಮಧ್ಯದ ಅವಧಿಗೆ ಉಪಜೀವನ ಎನ್ನಬಹುದು ಆದರೆ ಅದೇ ಜೀವನವಲ್ಲ. ಉಪಜೀವನ ಅಂದ ಮೇಲೆ ಜೀವನ ಅನ್ನೋದೊಂದು ಬೇರೆ ಇದ್ದಿರಲೇಬೇಕು. ಉದಾ: ಉಪಾಧ್ಯಕ್ಷರು ಅಂದ ಮೇಲೆ ಅವನಿಗಿಂತಲೂ ಮಿಗಿಲಾದ ಅಧ್ಯಕ್ಷನೊಬ್ಬ ಇರಲೇಬೇಕಲ್ಲ! ಹಾಗೆಯೇ ಮಾನವನ ಹುಟ್ಟಿಗಿಂತ ಪೂರ್ವದಲ್ಲಿ ಮತ್ತು ಸಾವಿನ ನಂತರವು ಬದುಕಿದೆ. ಅದೆಂದರೆ ಆತ್ಮನ ಸಂಚಾರ. ಜೀವಾತ್ಮನು ತಾನು ಮಾಡಿದ ಪಾಪ-ಪುಣ್ಯಗಳ ಅನುಗುಣವಾಗಿ ಅನೇಕಾನೇಕ ಜನ್ಮಗಳಲ್ಲಿ ಸುತ್ತಿ ಸುತ್ತಿ ಬರುತ್ತಾನೆ. ಪಾಪ-ಪುಣ್ಯಗಳ ಶೇಷ ಬರಿದಾಗುವವರೆಗೆ 'ಪುನರಪಿ ಜನನಂ ಪುನರಪಿ ಮರಣಂ' ಎಂಬಂತೆ ಭವಚಕ್ರದಲ್ಲಿ ಸಿಕ್ಕು ಆತ್ಮ ಸುತ್ತುತ್ತಲೇ ಇರುತ್ತವೆ. ಜಗನ್ಮಾತಾ ಅಕ್ಕಮಹಾದೇವಿಯವರು ಹೇಳುತ್ತಾರೆ.

ವಚನ: ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಲ್ಲ
ಎಂಭತ್ತನಾಲ್ಕು ಲಕ್ಷಯೋನಿಯೊಳಗೆ
ಬಂದೆನು ಬಂದೆನು.
ಬಾರದ ಭವಂಗಳ ಉಂಡೆನು ಉಂಡೆನು.
ಹಿಂದಿನ ಜನ್ಮವು ಏನಾದಡಾಗಲಿ
ಮುಂದೆ ನೀ ಕರುಣಿಸಾ ಚನ್ನಮಲ್ಲಿಕಾರ್ಜುನ.

ಕೇವಲ ಉಂಡುಟ್ಟು ಮಜಾ ಮಾಡುವುದು, ನಿದ್ರೆ ಮಾಡುವುದು ಜೀವನವಲ್ಲ. ಇದು ಜೀವನದ ಗುರಿಯೂ ಅಲ್ಲ. ಸೃಷ್ಟಿಕರ್ತನು ಸರ್ವಶಕ್ತನೂ ಆದ ಪರಮಪ್ರಭು ಲಿಂಗದೇವನು ನಮಗೆ ಕರುಣಿಸಿರುವ ಈ ಪಂಚಭೂತಾತ್ಮಕವಾದ ಪ್ರಪಂಚವನ್ನು ಮತ್ತು ಪಂಚ ವಿಂಶತಿ ತತ್ವದ ಶರೀರವನ್ನು ಸದುಪಯೋಗ ಮಾಡಿಕೊಂಡು ದೈವೀ ಅನುಗ್ರಹ ಅಥವಾ ಮುಕ್ತಿ ಪಡೆಯಲು ಪ್ರಯತ್ನಿಸುವುದೇ ಜೀವನದ ನಿಜವಾದ ಗುರಿ. ಇಂಥ ಜೀವನಕ್ಕೆ ಸಕಲ ದೃಷ್ಟಿಯಿಂದಲು ಮಾರ್ಗದರ್ಶನ ಮಾಡುವ ತತ್ವ ವಿಶೇಷಕ್ಕೆ ಪರಿಪೂರ್ಣ ಧರ್ಮ ಎನ್ನಬಹುದು. ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಸಂಸ್ಥಾಪಿಸಿ ಕೊಟ್ಟಿರುವ 'ಲಿಂಗಾಯತ'ವು ಸ್ವತಂತ್ರ ಪರಿಪೂರ್ಣ ಮತ್ತು ಸ್ವಾವಲಂಬಿ ಧರ್ಮವೇ ವಿನಾ ಜಾತಿ, ಮತ ಅಥವಾ ಪಂಥವಲ್ಲ. ಯಾವುದೇ ಒಂದು ಧರ್ಮವು ಅದು ಸ್ವತಂತ್ರ ಧರ್ಮ ಎನಿಸಿಕೊಳ್ಳಬೇಕಾದರೆ ಈ ಕೆಳಗಿನ ಲಕ್ಷಣಗಳನ್ನು ಹೊಂದಿರ ಬೇಕಾಗುತ್ತದೆ.

ಪರಂಪರೆ, ಸಂಸ್ಕೃತಿ, ಅರ್ಥಶಾಸ್ತ್ರ, ನೀತಿಶಾಸ್ತ್ರ, ಸಮಾಜಶಾಸ್ತ್ರ, ಸಂಸ್ಕಾರ, ದರ್ಶನ, ಸಾಧನೆ, ಸಿದ್ಧಾಂತ, ಧರ್ಮ ಸಂಹಿತೆ ಮತ್ತು ಧರ್ಮಗುರು. ಲಿಂಗಾಯತ ಧರ್ಮವು ತನ್ನದೇ ಆದ ತತ್ವ ಸಮೂಹವನ್ನು ಹೊಂದಿ ಸ್ವತಂತ್ರವಾಗಿದೆ.

ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಹರಿದು ಬಂದ ಶರಣ ಪರಂಪರೆ, ಅವೈದಿಕ ಸಂಸ್ಕೃತಿ, ಕಾಯಕ-ದಾಸೋಹವೆಂಬ ಅರ್ಥಶಾಸ್ತ್ರ, ಮಾನವೀಯತೆಯುಳ್ಳ ನೀತಿಶಾಸ್ತ್ರ, ಅತಿವರ್ಣಾಶ್ರಮದ ಸಮಾಜಶಾಸ್ತ್ರ, ಇಷ್ಟಲಿಂಗ ದೀಕ್ಷೆ -ಸಂಸ್ಕಾರ, ಷಟಸ್ಥಲ ದರ್ಶನ, ಲಿಂಗಾಂಗಯೋಗ ಸಾಧನೆ, ಶೂನ್ಯ ಸಿದ್ಧಾಂತ, ಸಮಾನತೆ ಸಾರುವ ವಚನ ಸಾಹಿತ್ಯವೆಂಬ ಧರ್ಮಸಂಹಿತೆ ಹಾಗೂ ಇವೆಲ್ಲವನ್ನು ಕೊಟ್ಟಿರುವ ಮಂತ್ರಪುರುಷ ಬಸವಣ್ಣನವರು ಲಿಂಗಾಯತ ಧರ್ಮದ ಸಂಸ್ಥಾಪಕ ಧರ್ಮಗುರುವಾಗಿದ್ದಾರೆ.

ಗುರುವಿನ ಪರಿಕಲ್ಪನೆ

ಇಷ್ಟಲಿಂಗ ಜನಕರಾದ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿದ ವಿಶ್ವದ ಪ್ರಪ್ರಥಮ ಪಾರ್ಲಿಮೆಂಟ್ ಎಂಬ ಹೆಗ್ಗಳಿಕೆಗೆ ಪಾತ್ರವಾದ ಸಂಸ್ಥೆ ಅನುಭವ ಮಂಟಪ. ಆ ಅನುಭವ ಮಂಟಪದ ಮೂಲಕ ನೀಡಲ್ಪಟ್ಟ ಲಿಂಗಾಯತ ಧರ್ಮದ ಪ್ರಮುಖ ತತ್ವಗಳೆಂದರೆ, ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳು. ಲಿಂಗಾಯತ ಧರ್ಮಕ್ಕೆ ಅಷ್ಟಾವರಣವೇ

ಅಂಗ ಪಂಚಾಚಾರವೇ ಪ್ರಾಣ ಮತ್ತು ಷಟ್‌ಸ್ಥಲವೇ ಆತ್ಮ .

ಅಷ್ಟ ಆವರಣ ಅಥವಾ ಎಂಟು ರಕ್ಷಾ ಕವಚಗಳಲ್ಲಿ ಮೊದಲನೆಯ ಮೂರು ಅಂದರೆ ಗುರು, ಲಿಂಗ, ಜಂಗಮ ಇವು ಪೂಜ್ಯ ಮತ್ತು ಪೂಜ್ಯನೀಯ ವಸ್ತುಗಳು. ವಿಭೂತಿ, ರುದ್ರಾಕ್ಷಿ, ಮಂತ್ರ ಇವು ಪೂಜೆಗೆ ಬಳಸುವ ಸಾಧನಗಳಾದರೆ, ಕರುಣೋದಕ (ಪಾದೋದಕ) ಮತ್ತು ಕರುಣ ಪ್ರಸಾದ (ಪ್ರಸಾದ) ಪೂಜಾಫಲಗಳು.

ಗುರು ಎನ್ನುವ ಶಬ್ದಕ್ಕೆ ಹಲವಾರು ಅರ್ಥಗಳುಂಟು. ಗಾಂಧಿ ಎಂದ ಮಾತ್ರಕ್ಕೆ ಎಲ್ಲರನ್ನು ಮಹಾತ್ಮಗಾಂಧಿ ಎನ್ನಲು ಸಾಧ್ಯವಿಲ್ಲ. ಇಂದಿರಾ ಗಾಂಧಿ ಬೇರೆ, ರಾಜೀವ ಗಾಂಧಿ ಬೇರೆ, ಸೋನಿಯಾ ಗಾಂಧಿ ಬೇರೆ, ರಾಹುಲ ಗಾಂಧಿ ಬೇರೆ.

ಒಂದು ಚಿಕ್ಕ ಹಳ್ಳಿ. ಅಲ್ಲಿ ಪ್ರೌಢ ಶಾಲೆಯಿತ್ತು. ಶಿಕ್ಷಣಾಧಿಕಾರಿಗಳು ಒಂದು ದಿನ ಪರಿವೀಕ್ಷಣೆಗೆ ಹೋಗಿದ್ದರು. ಎಂಟನೆ ತರಗತಿಯ ವಿದ್ಯಾರ್ಥಿಗಳಿಗೆ ಒಂದು ಪ್ರಶ್ನೆಯನ್ನು ಕೇಳುತ್ತಾರೆ. ಅದೇನೆಂದರೆ ಭಾರತದ ರಾಷ್ಟ್ರಪಿತ ಗಾಂಧೀಜಿಯವರ ಪೂರ್ಣ ಹೆಸರೇನು? ಆಗ ಒಬ್ಬ ವಿದ್ಯಾರ್ಥಿ ಎದ್ದು ನಿಂತು ಹೇಳುತ್ತಾನೆ. ಗಾಂಧೀಜಿಯವರ ಪೂರ್ಣ ಹೆಸರು ರಾಹುಲಗಾಂಧಿ. ಹೀಗೆ ಗಾಂಧಿ ಶಬ್ದವು ಎಷ್ಟು ಗೊಂದಲಕ್ಕೀಡು ಮಾಡಿದೆಯೋ ಗುರುವಿನ ಕುರಿತು ಲಿಂಗಾಯತ ಸಮಾಜದಲ್ಲಿ ಅಷ್ಟೇ ಗೊಂದಲಗಳಿವೆ.

ಒಂದು ಮಗುವಿಗೆ ತಾಯಿ-ತಂದೆ ಹೇಗಿರುವರೋ ಹಾಗೆಯೇ ಒಂದು ಧರ್ಮಕ್ಕೂ ಸಹ ಒಬ್ಬ ಧರ್ಮಗುರು ಹಾಗೂ ಧರ್ಮ ಸಂಹಿತೆ ಇರುತ್ತವೆ. ಉದಾ: ಇಸ್ಲಾಂ ಧರ್ಮಕ್ಕೆ ಖುರಾನ್ ತಾಯಿಯಾದರೆ, ಪ್ರವಾದಿ ಮೊಹ್ಮದ್ ಪೈಗಂಬರರು ತಂದೆಯಿದ್ದಂತೆ, ಕ್ರೈಸ್ತ ಧರ್ಮದ ತಾಯಿ ಬೈಬಲ್ ಆದರೆ ತಂದೆ ಏಸು ಕ್ರಿಸ್ತ, ಗ್ರಂಥ ಸಾಹಿಬ್ ಮತ್ತು ಗುರುನಾನಕರು ಸಿಖ್ಖ್‌ಧರ್ಮದ ತಾಯಿ-ತಂದೆಯರಿದ್ದಂತೆ. ಸಿಖ್ಖ್ ಧರ್ಮಕ್ಕಿಂತ ನಾಲ್ಕು ಶತಮಾನಗಳ ಮುಂಚೆಯೇ ಹುಟ್ಟಿರುವ ಲಿಂಗಾಯತ ಧರ್ಮದ ಸಂಸ್ಥಾಪಕ ಗುರು ಬಸವಣ್ಣನವರು ಈ ಧರ್ಮದ ತಂದೆಯಾಗಿದ್ದಾರೆ. ಸಮಾನತೆ ಸಾರುವ ವಚನ ಸಾಹಿತ್ಯ ನಮ್ಮ ತಾಯಿ ಸ್ವರೂಪದಲ್ಲಿದೆ.

ಧರ್ಮ ಸ್ಥಾಪಕ ಗುರು ಬಸವಣ್ಣನವರು

12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಇಷ್ಟಲಿಂಗವನ್ನು ಕಂಡುಹಿಡಿದು ಅದರ ಮೂಲಕ ಲಿಂಗಾಯತ ಎಂಬ ಹೊಸ ಧರ್ಮವನ್ನು ನೀಡಿದರು. ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರ ವಚನಗಳೇ ಇದಕ್ಕೆ ಆಧಾರವಾಗಿವೆ. ಮಗುವಿನ ತಂದೆ-ಯಾರು? ಎಂಬುದನ್ನು ಅಧಿಕೃತವಾಗಿ ಹೇಳಬೇಕಾದರೆ ಆ ಮಗುವಿನ ತಾಯಿಗೆ ಮಾತ್ರ ಸಾಧ್ಯ. ಇವರು ನಮ್ಮ ತಂದೆ ಎಂದು ತಾಯಿಯು ಬಾಲ್ಯದಿಂದಲೇ ಮಗುವಿಗೆ ಹೇಳಿಕೊಡುತ್ತಾಳೆ. ಅದನ್ನೇ ನಾವೆಲ್ಲ ಅಧಿಕೃತವಾಗಿ ನಂಬುತ್ತೇವೆ. ನಂಬಲೇಬೇಕು. ವಚನಸಾಹಿತ್ಯ ಎಂಬ ತಾಯಿಯು ಬಸವಣ್ಣನೇ ನಮ್ಮ ತಂದೆ ಎಂದು ಹೇಳುತ್ತಲೇ ಇದ್ದಾಳೆ. ಎಲ್ಲ ಶರಣರ ವಚನಗಳಲ್ಲಿಯೂ ಕೂಡ ವಿಶ್ವಗುರು ಬಸವಣ್ಣನವರೇ ಲಿಂಗಾಯತ ಧರ್ಮದ ಆದಿಗುರು ಅಥವಾ ಸಂಸ್ಥಾಪಕರು ಎಂಬುದಕ್ಕೆ ಸ್ಪಷ್ಟ ದಾಖಲೆಗಳಿವೆ.

ಶೂನ್ಯ ಪೀಠದ ಪ್ರಥಮ ಪೀಠಾಧ್ಯಕ್ಷರಾಗಿದ್ದ ವ್ಯೋಮಕಾಯಸಿದ್ಧ ಅಲ್ಲಮ ಪ್ರಭುದೇವರು.

ವಚನ : ಆಯಿತ್ತು ಬಸವ ನಿನ್ನಿಂದ ಗುರು ಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಲಿಂಗ ಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಜಂಗಮ ಸ್ವಾಯತವೆನಗೆ
ಆಯಿತ್ತು ಬಸವಾ ನಿನ್ನಿಂದ ಪ್ರಸಾದ ಸ್ವಾಯತವೆನಗೆ
ಇಂತೀ ಚತುರ್ವಿಧ ಸ್ವಾಯತವನು ನೀನೇ ಆಗು ಮಾಡಿದೆಯಾಗಿ
ನಮ್ಮ ಗುಹೇಶ್ವರ ಲಿಂಗಕ್ಕೆ ವಿಳಾಸವಾದೆಯಲ್ಲ ಸಂಗನ ಬಸವಣ್ಣ

ತಮಗೆ ಗುರು, ಲಿಂಗ, ಜಂಗಮ ಮತ್ತು ಪ್ರಸಾದ ಈ ಚತುರ್ವಿಧವು ಲಭಿಸಿದ್ದು ಗುರುಬಸವಣ್ಣನವರಿಂದ ಎಂದು ಪ್ರಭುದೇವರು ಹೇಳಿದ್ದಾರೆ.

ಇನ್ನೊಂದು ವಚನದಲ್ಲಿ ಪ್ರಭುದೇವರು ಹೀಗೆ ಹೇಳಿದ್ದಾರೆ.

ವಚನ : ಮಹಾಮಹಿಮ ಸಂಗನ ಬಸವಣ್ಣನು
ಎನಗೆಯೂ ಗುರು, ನಿನಗೆಯೂ ಗುರು
ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರ
(ಅಪ್ರವಸಂ-2 ವಚನ 1551)

ಅನುಭವ ಮಂಟಪದ ಷಡ್‌ಗಣಾಧೀಶರಲ್ಲಿ ಒಬ್ಬರಾದ ಸೊನ್ನಲಾಪುರದ ಲಿಂಗಾಂಗಯೋಗಿ ಸಿದ್ಧರಾಮೇಶ್ವರರು ತಮ್ಮ ಅನೇಕ ವಚನಗಳಲ್ಲಿ ಹಾಗೂ ತ್ರಿಪದಿಗಳಲ್ಲಿ ಬಸವಣ್ಣನವರೇ ಲಿಂಗಾಯತ ಧರ್ಮ ಮತ್ತು ಇಷ್ಟಲಿಂಗ ಯೋಗದ ಕರ್ತೃ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ವಚನ: ಕರುಣಿ ಬಸವಾ, ಕಾಲಹರ ಬಸವಾ ಕರ್ಮಹರ ಬಸವಾ
ನಿರ್ಮಳ ಬಸವಾ, ಶಿವಜ್ಞಾನ ಬಸವಾ
ನಿಮ್ಮ ಧರ್ಮವಯ್ಯಾ ಈ ಭಕ್ತಿಯ ಪಥವು
ಕರುಣಿ ಕಪಿಲಸಿದ್ಧ ಮಲ್ಲಿನಾಥಯ್ಯ
ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ
(ಸಿವಸಂ-4, ವಚನ 328)

ನಾವು ಆಚರಿಸುತ್ತಿರುವ ಈ ಧರ್ಮ ಅಥವಾ ಭಕ್ತಿಯ ಪಥವು ಗುರು ಬಸವಣ್ಣನವರದು ಎಂದಿರುವ ಶ್ರೀ ಸಿದ್ಧರಾಮೇಶ್ವರರು ಕಪಿಲಸಿದ್ಧ ಮಲ್ಲಿಕಾರ್ಜುನನೇ ಅಂದರೆ ದೇವರೆ ನಿನಗೂ ಮತ್ತು ನನಗೂ ಬಸವಣ್ಣನದೇ ಧರ್ಮ ಎಂದಿದ್ದಾರೆ.

ವಚನ : ಬಸವನ ಯೋಗದಿಂ ಹಸನಾಯಿತ್ತೈ ಲೋಕ
ಬಸವನೇ ಗತಿ ಎನಲು ಹಿಂಗುವುದು ಭವವು
ಬಸವಯ್ಯ ಬಸವೇಶ ಬಸವಣ್ಣ ಎಂದೆನಲು
ಆನು ಬದುಕಿದೆನಯ್ಯ ಯೋಗಿನಾಥ

ಇಷ್ಟಲಿಂಗವು ಬಸವಣ್ಣನವರಿಗಿಂತ ಪೂರ್ವದಲ್ಲಿಯೇ ಇತ್ತು ಎಂದೆಲ್ಲ ಕೆಲವರು ವಾದಿಸುವುದುಂಟು. ಅವರಿಗೆ ಶರಣ ಸಿದ್ಧರಾಮೇಶ್ವರರ ಮೇಲಿನ ವಚನವೇ ಉತ್ತರ ನೀಡಲಿದೆ. ಇಷ್ಟಲಿಂಗ ಯೋಗವು ಗುರುಬಸವಣ್ಣನವರಿಂದ ಕೊಡಲ್ಪಟ್ಟಿದ್ದು ಎನ್ನುವುದಕ್ಕೆ ಇದಕ್ಕಿಂತ ಬೇರೆ ಆಧಾರಬೇಕೆ? ಸಿದ್ಧರಾಮೇಶ್ವರ ಶರಣರು ಇಷ್ಟಲಿಂಗ'ಯೋಗಕ್ಕೆ ಬಸವನ ಯೋಗವೆಂದೇ ಕರೆದಿದ್ದಾರೆ. ಇಂಥ ಮಹಾನ್ ಯೋಗದಿಂದ ಲೋಕವೇ ಹಸನಾಯಿತ್ತು ಎಂದು ಹೃದಯ ತುಂಬಿ ಹಾಡಿದ್ದಾರೆ.

ಬಸವಣ್ಣನವರಿಲ್ಲದೆ ಯಾವ ಗುರುವಿಲ್ಲ, ಭಕ್ತಿಯಿಲ್ಲ, ಜ್ಞಾನವೂ ಇಲ್ಲ ಎಂದಿರುವ ಬಸವಯೋಗಿ ಸಿದ್ಧರಾಮೇಶ್ವರರು ತಮ್ಮ ಇನ್ನೊಂದು ವಚನದಲ್ಲಿ ಹೀಗೆ ಹೇಳುತ್ತಾರೆ.

ವಚನ : ನೋಟದ ಭಕ್ತಿ ಬಸವನಿಂದಾಯಿತ್ತು
ಕೂಟದ ಜ್ಞಾನ ಬಸವನಿಂದಾಯಿತ್ತು
ಎಲ್ಲಿಯ ಶಿವಜ್ಞಾನ, ಎಲ್ಲಿಯ ಮಾಟಕೂಟ, ಬಸವನಲ್ಲದೆ!
ಮಹಾಜ್ಞಾನ, ಮಹಾಪ್ರಕಾಶ ಬಸವಣ್ಣನ ಧರ್ಮವಯ್ಯ
ಕಪಿಲಸಿದ್ಧ ಮಲ್ಲಿನಾಥಯ್ಯಾ. (ಸಿವಸಂ-4,ವಚನ 558)

ಗಣಾಚಾರಿ ಶರಣರಾದ ಅಂಬಿಗರ ಚೌಡಯ್ಯನವರು ಗುರು-ಲಿಂಗ-ಜಂಗಮ, ಪಾದೋದಕ ಪ್ರಸಾದ ಇವೆಲ್ಲದಕ್ಕೂ ಆಧಾರ ಶ್ರೀ ಗುರು ಬಸವಣ್ಣನವರು ಎಂದಿದ್ದಾರೆ.

ವಚನ ; ಗುರು-ಲಿಂಗ-ಜಂಗಮಕ್ಕೆ ಆಧಾರ ಬಸವಣ್ಣ

ಪಾದೋದಕ, ಪ್ರಸಾದಕ್ಕೆ ಆಧಾರ ಬಸವಣ್ಣ
ಸರ್ವಾಪತ್ತಿಗಾಧಾರ ಬಸವಣ್ಣ. (ಸಂ.ವ.ಸಂ.-1, ವಚನ, 136)

ವೀರ ಗಣಾಚಾರಿ ಮಡಿವಾಳ ಮಾಚಿದೇವರು ತಮ್ಮ ವಚನಗಳಲ್ಲಿ ಏನು ಹೇಳಿದ್ದಾರೆ ನೋಡೋಣ.

ವಚನ ; ಗುರುವಾದರೂ ಬಸವಣನಿಲ್ಲದೆ ಗುರುವಿಲ್ಲ.
ಲಿಂಗವಾದರೂ ಬಸವಣ್ಣನಿಲ್ಲದೆ ಲಿಂಗವಿಲ್ಲ.
ಜಂಗಮವಾದರೂ ಬಸವಣ್ಣನಿಲ್ಲದೆ ಜಂಗಮವಿಲ್ಲ.
ಪ್ರಸಾದವಾದರೂ ಬಸವಣ್ಣನಿಲ್ಲದೆ ಪ್ರಸಾದವಿಲ್ಲ.
ಅನುಭಾವವಾದರೂ ಬಸವಣ್ಣನಿಲ್ಲದೆ ನುಡಿಯಲಾಗದು.
ಇಂತು ಸಂಗಿಸುವಲ್ಲಿ, ಸುಸಂಗಿಸುವಲ್ಲಿ.
ಮಹಾಸಂಗಿಸುವಲ್ಲಿ ಪ್ರಸಾದ ಸಂಗಿಸುವಲ್ಲಿ,
ಕಲಿದೇವಾ ನಿಮ್ಮ ಶರಣ ಬಸವಣ್ಣನ ನಿಲವು.

ಬಸವಣ್ಣನಿಲ್ಲದೆ ಗುರುವೂ ಇಲ್ಲ. ಲಿಂಗವೂ ಇಲ್ಲ. ಜಂಗಮವೂ ಇಲ್ಲ. ಪ್ರಸಾದವೂ ಇಲ್ಲ. ಅನುಭಾವವೂ ಇಲ್ಲ. ಇವೆಲ್ಲವುಗಳಿಗೂ ಮೂಲ ಆಧಾರ ಬಸವಣ್ಣನವರೆ ಎಂಬುದನ್ನು ಮೇಲಿನ ವಚನದಿಂದ ವಿದಿತವಾಗುತ್ತದೆ.

ವಚನ : ಬ ಎಂಬಲ್ಲಿ ಎನ್ನ ಭವವು ಹರಿಯಿತ್ತು
ಸ ಎಂಬಲ್ಲಿ ಸರ್ವಜ್ಞಾನಿಯಾದೆನು.
ವ ಎಂದು ವಚಿಸುವಡೆ ವಸ್ತು ಚೈತನ್ಯಾತ್ಮಕನಾದೆನು
ಇಂತಿ ಬಸವಾಕ್ಷರತ್ರಯವೆನ್ನ ಸರ್ವಾಂಗದಲ್ಲಿ
ತೊಳಗಿ ಬೆಳಗಿದ ಭೇದವನರಿದು
ಆನು ನೀನು ಬಸವಾ ಬಸವಾ ಬಸವಾ
ಎನುತಿರ್ದೆವಯ್ಯಾ ಗುಹೇಶ್ವರಾ. (ಅಪ್ರವಸಂ- 2ವಚನ 1378)

ಬ ಎಂದು ಉಚ್ಚರಿಸಿದ ಮಾತ್ರಕ್ಕೆ ಭವ ಹರಿಯುತ್ತದೆ. ಸ ಎಂದರೆ ಸರ್ವಜ್ಞಾನಿಯಾಗಬಲ್ಲೆವು. ವ ಎಂದು ವಚಿಸಿದಾಗ ವಸ್ತು ಚೈತನ್ಯಾತ್ಮಕ ಅಥವಾ ಪರಮಾತ್ಮನ ಸ್ವರೂಪವೇ ನಾವಾಗುತ್ತೇವೆ. ಅಂಥ ಅದ್ಭುತಶಕ್ತಿ ಈ ಬಸವಾಕ್ಷರತ್ರಯದಲ್ಲಿದೆ ಎಂದು ಶೂನ್ಯ ಪೀಠಾಧೀಶರಾದ ಅಲ್ಲಮಪ್ರಭುದೇವರು ತಮ್ಮ ಅನುಭವ ವಾಣಿಯಿಂದ ಸಾರಿದ್ದಾರೆ.

ವಿಶ್ವಗುರು ಮಂತ್ರಪುರುಷ, ಬಸವಣ್ಣನವರೆ ಲಿಂಗಾಯತ ಧರ್ಮದ ಸಂಸ್ಥಾಪಕರು, ಆದಿ ಪ್ರಮಥರು ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ಆಧಾರಬೇಕೆ?

ಹಳಿ ತಪ್ಪಿಸಿದವರಾರು ?

ಜಗತ್ತಿನಲ್ಲಿ ಬೇರೆ ಬೇರೆ ಪ್ರವಾದಿಗಳನ್ನು ನಾವು ನೋಡಿದಾಗ ಅವರು ಆಗಿಹೋದ ನೂರಾರು ವರುಷಗಳ ನಂತರ ಅವರ ಶಿಷ್ಯರು, ಅನುಯಾಯಿಗಳು ತಮ್ಮ ಗುರುವಿನ ಹೆಸರನ್ನು ಮಂತ್ರವನ್ನಾಗಿಸಿದ್ದನ್ನು ಕಾಣಬರುತ್ತದೆ. ಆದರೆ ಗುರುಬಸವೇಶ್ವರರ ವಿಶೇಷತೆಯೆಂದರೆ, ಅವರು ಜೀವಿತಾವಧಿಯಲ್ಲೇ ತಾವು ಮಂತ್ರಪುರುಷರಾಗಿದ್ದು. ಅಲ್ಲಮಪ್ರಭುದೇವರಂಥ ಮಹಾ ಮೇಧಾವಿಗಳು, ಸಿದ್ಧರಾಮೇಶ್ವರರಂಥ ಕಾಯಕಯೋಗಿಗಳು, ಚಿನ್ಮಯ ಜ್ಞಾನಿಗಳಾದ ಚನ್ನಬಸವಣ್ಣ, ವೈರಾಗ್ಯನಿಧಿ ಅಕ್ಕಮಹಾದೇವಿಯಂಥ ದಾರ್ಶನಿಕರಿಂದ ಮಂತ್ರ ಪುರುಷರೆನಿಸಿ ಕೊಂಡದ್ದು ಮಾತ್ರವಲ್ಲ, 'ಶ್ರೀ ಗುರು ಬಸವ' ಎಂಬ ಹೆಸರು ನವಪ್ರಣವವಾಯಿತು.

12ನೆಯ ಶತಮಾನದಿಂದ 20ನೇ ಪೂರ್ವದ ದಶಕ ಅಂದರೆ 1904ರ ವರೆಗೆ ವಿಶ್ವಗುರು ಬಸವಣ್ಣನವರೆ ಲಿಂಗಾಯತ ಧರ್ಮದ ಸಂಸ್ಥಾಪಕರು ಎನ್ನುವ ಬಗ್ಗೆ ಎರಡು

ಮಾತೆ ಇರಲಿಲ್ಲ. ಆ ಅವಧಿಯಲ್ಲಿ ಆಗಿಹೋದ ಸರ್ವ ಶರಣರು ಗುರುಬಸವಣ್ಣನವರನ್ನು ಹಾಡಿ ಕೊಂಡಾಡಿದ್ದಾರೆ. ಬಸವಣ್ಣನವರಿಂದಲೇ ಲಿಂಗಾಯತ ಧರ್ಮ ಸ್ಥಾಪನೆಯಾದದ್ದು; ಇಷ್ಟಲಿಂಗವನ್ನು ಕಂಡು ಹಿಡಿದ ಮಹಾವಿಜ್ಞಾನಿ ಬಸವಣ್ಣನವರು ಎಂಬುದನ್ನು ಎಲ್ಲ ಶರಣರು ಸಾರಿ ಸಾರಿ ಹೇಳಿದ್ದಾರೆ. ಇಪ್ಪತ್ತನೆಯ ಶತಮಾನದ ಆರಂಭದ ದಶಕದಲ್ಲಿ ಅಂದರೆ ಒಂದು ನೂರು ವರ್ಷಗಳಿಂದ ಈಚೆಗೆ ಲಿಂಗಾಯತ ಸಮಾಜವನ್ನು ದಾರಿ ತಪ್ಪಿಸುವ ಅಥವಾ ಹಳಿ ತಪ್ಪಿಸುವ ಕಾರ್ಯ ಆರಂಭವಾಗಿದೆ. ಮೊಟ್ಟ ಮೊದಲು ಈ ಕಾರ್ಯವನ್ನು ಮಾಡಿದ ಶ್ರೇಯಸ್ಸು ಹಾನಗಲ್ ಕುಮಾರಸ್ವಾಮಿಗಳಿಗೆ ಸಲ್ಲುತ್ತದೆ. ಶಿವಯೋಗ ಮಂದಿರ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾ ಸ್ಥಾಪನೆ ಮಾಡುವ ಮೂಲಕ ಲಿಂಗಾಯತ ಸಮಾಜದಲ್ಲಿ ವಿಷಬೀಜ ಬಿತ್ತಲು ಆರಂಭಿಸಿದರು. ಮೊಟ್ಟಮೊದಲು ಶಿವಯೋಗ ಮಂದಿರದ ಧ್ಯೇಯ ಉದ್ದೇಶಗಳು ಅಥವಾ ನಿಯಮಾವಳಿ ತಯಾರಿಸಿದಾಗ "ಲಿಂಗಾಯತ ಬೇರೆಯಲ್ಲ, ವೀರಶೈವ ಬೇರೆಯಲ್ಲ. ಎರಡೂ ಒಂದೆ. ಬಸವಣ್ಣನವರಿಗೂ ಪೂರ್ವದಲ್ಲಿಯೇ ಈ ಧರ್ಮವಿತ್ತು. ವೇದ ಆಗಮಗಳು ನಮಗೆ ಪ್ರಮಾಣ ಗ್ರಂಥಗಳು" ಎಂದೆಲ್ಲ ಬರೆಸಿ ಗುರುದ್ರೋಹದ ಕಾರ್ಯ ಮಾಡಿದರು. ವಚನ ಸಾಹಿತ್ಯವೆಂಬ ತಾಯಿಯು ಬಸವಣ್ಣನೆ ಈ ಧರ್ಮಕ್ಕೆ ತಂದೆ ಎಂದು ಸಾರಿ ಸಾರಿ ಹೇಳುತ್ತಿದ್ದರೂ ಸಹ ಇಂಥ ಶ್ರೇಷ್ಠ ಸಾಹಿತ್ಯವನ್ನು ಕಡೆಗಣಿಸಿ ಶಿವಯೋಗ ಮಂದಿರದಲ್ಲಿ ವಟುಗಳಿಗೆ ವೇದ-ಉಪನಿಷತ್ತಿನ ಸಂಸ್ಕೃತ ಶ್ಲೋಕಗಳನ್ನು ಕಂಠಪಾಠ ಮಾಡಿಸಲು ಆರಂಭಿಸಿದರು. ಧರ್ಮಗುರು ಬಸವಣ್ಣನವರ ಸಂದೇಶಗಳನ್ನು ಕಡೆಗಣಿಸಿ ಈ ಲಿಂಗಾಯತ ಧರ್ಮಕ್ಕೆ ಶೈವ ಧರ್ಮದ ಕೊಳಕನ್ನು ತಂದು ಸೇರಿಸುವ ಕಾರ್ಯಕ್ಕೈಗೊಂಡರು. ಅಲ್ಲಿಯವರೆಗೆ ಜನರಲ್ಲಿ ಬಳಕೆಯಲ್ಲಿದ್ದ ಅನುಭವ ಮಂಟಪವನ್ನು 'ಶಿವಾನುಭವ ಮಂಟಪ' ಅನುಭವ ಗೋಷ್ಠಿಯನ್ನು 'ಶಿವಾನುಭವಗೋಷ್ಠಿ' ಶರಣ-ಶರಣೆಯರು ಎಂಬ ಪದಗಳಿಗೆ ಶಿವಶರಣ-ಶಿವಶರಣೆಯರು ಎಂದು ರೂಪಾಂತರಿಸಲಾಯಿತು. ಲಿಂಗಾಯತ ಎಂಬ ಒಂದೇ ಶಬ್ದ ರೂಢಿಯಲ್ಲಿದ್ದರೂ ಸಹ ವೀರಶೈವ-ಲಿಂಗಾಯತ ಎಂದು ಜೋಡು ಪದಗಳ ಬಳಕೆ ಮಾಡಲು ಹಾನಗಲ್ ಸ್ವಾಮಿಗಳು ಆರಂಭಿಸಿದರು. ಲಿಂಗಾಯತ ಧರ್ಮಕ್ಕೆ ಸಂಬಂಧವೇ ಇಲ್ಲದ ವೀರಶೈವ ಪದವನ್ನು ತಂದು ಕೃತಕವಾಗಿ ಸಾಹಿತ್ಯದ ಮೂಲಕ ಈ ಸಮಾಜದಲ್ಲಿ ತೂರಿಸಲಾಯಿತು. ಕರ್ನಾಟಕದ ದಕ್ಷಿಣ ತುದಿಯಾಗಿರುವ ಮಲೈ ಮಹದೇಶ್ವರ ಬೆಟ್ಟದಿಂದ ಹಿಡಿದು ಉತ್ತರ ತುದಿಯ ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ನಾಗಮಾರಪಳ್ಳಿ ವರೆಗೆ ಹಳ್ಳಿಯ ಜನರು ಇವತ್ತಿಗೂ ಸಹ ನೀವು ಯಾರು ಅಂತ ಕೇಳಿದಾಗ ನಾವು ಲಿಂಗಾಯತರು ಅಂತಲೇ ಹೇಳುತ್ತಾರೆ. ತಮಿಳುನಾಡಿನ ನೀಲಗಿರಿ ಜಿಲ್ಲೆಯ ಊಟಿ, ಸಕಲಟ್ಟಿ, ಕಾಟೇರಿ ಮುಂತಾದ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿರುವ ಶರಣರು ಸಹ ಲಿಂಗಾಯತ ಅಂತಲೇ ಹೇಳುತ್ತಾರೆ. ಮಹಾರಾಷ್ಟ್ರದ ಹಳ್ಳಿ ಮತ್ತು ಪಟ್ಟಣಗಳಲ್ಲಿ "ಆಪಲಾ ಲಿಂಗಾಯತ ಸಮಾಜ" (ನಮ್ಮ ಲಿಂಗಾಯತ ಸಮಾಜ)' ಆಮ್ಹಿ ಲಿಂಗಾಯತ ಆಹೋತ್' (ನಾವು ಲಿಂಗಾಯತರಿದ್ದೀವಿ) ಅನ್ನುತ್ತಾರೆಯೇ ವಿನಃ ವೀರಶೈವ ಎಂಬ ಪದ ಯಾರ ಬಾಯಲ್ಲೂ ಬರೋದಿಲ್ಲ. ಎಂಟುನೂರು ವರ್ಷಗಳಿಂದಲೂ ಲಿಂಗಾಯತ ಅನ್ನುವ ಪದವೇ ಈ ಧರ್ಮಕ್ಕೆ ಬಳಕೆಯಲ್ಲಿರುವುದರಿಂದ ಸಹಜವಾಗಿಯೇ ಅದು ಎಲ್ಲರ ನಾಲಿಗೆ ಮೇಲೆ ನಲಿಯುತ್ತಿದೆ. ಆದರೆ ವೀರಶೈವವಾದಿ ಮಠಾಧೀಶರು ಜನರ ಬಾಯಿಂದ ವೀರಶೈವ ಹೇಳಿಸಲು ಇಂದು ಹರ ಸಾಹಸ ಮಾಡುತ್ತಿದ್ದಾರೆ ಆದರೂ ಸಾಧ್ಯವಾಗುತ್ತಿಲ್ಲ ಅದು ಸಾಧ್ಯವೂ ಇಲ್ಲ.

ವೈದಿಕ ಧರ್ಮದ ಚತುರ್ವರ್ಣ ವ್ಯವಸ್ಥೆಯನ್ನು ಧರ್ಮಗುರು ಬಸವಣ್ಣನವರು ತೀವ್ರವಾಗಿ ಖಂಡಿಸಿದರು. ಸ್ವತಃ ಶೈವ ಬ್ರಾಹ್ಮಣರಾಗಿದ್ದ ಅವರು ಅಲ್ಲಿದ್ದ ಅಸಮಾನತೆ-ತಾರತಮ್ಯವನ್ನು ಪ್ರತಿಭಟಿಸಿ ಬಾಲ್ಯದಲ್ಲಿ ಅಂದರೆ ತಮ್ಮ 8ನೆಯ ವಯಸ್ಸಿನಲ್ಲಿಯೇ ಮನೆ ತ್ಯಜಿಸಿ ಬಂದರು. 12 ವರ್ಷಗಳ ಕಾಲ ಕೂಡಲಸಂಗಮ ಸುಕ್ಷೇತ್ರದಲ್ಲಿ ತಪಗೈದು, ಎಲ್ಲ

ಧರ್ಮಗಳ ಅಧ್ಯಯನ ಮಾಡಿ ತಮ್ಮ 21ನೆಯ ವಯಸ್ಸಿನಲ್ಲಿ ಇಷ್ಟಲಿಂಗವನ್ನು ಕಂಡು ಹಿಡಿದು ತನ್ಮೂಲಕ ಸರ್ವಸಮತೆಯ ಕಹಳೆಯೂದಿ ಹೊಸ ಧರ್ಮವನ್ನು ನೀಡಿದರು ಅದುವೇ ಲಿಂಗಾಯತ.

ಇವನಾರವ ಇವನಾರವ ಇವನಾರವನೆಂದೆನಿಸದೆ ಇವನಮ್ಮವ ಇವನಮ್ಮವ ಇವನಮ್ಮವನೆಂದು, ದೇವನೊಬ್ಬನೆ ತಂದೆ; ಮನುಜರೆಲ್ಲರೂ ಒಂದೆ ಎಂಬ ವಿಶ್ವಭ್ರಾತೃತ್ವದ ಸಂದೇಶ ಸಾರುವ ಗುರುಬಸವ ಪ್ರಣೀತ ಲಿಂಗಾಯತ ಧರ್ಮದ ಸಂಹಿತೆ ವಚನ ಸಾಹಿತ್ಯ ಇಂಥ ಶ್ರೇಷ್ಠವಾದ ಸಾಹಿತ್ಯವನ್ನು ಬಿಟ್ಟು ವರ್ಣಾಶ್ರಮ ವ್ಯವಸ್ಥೆಯನ್ನು ಲಿಂಗಾಯತ ಸಮಾಜದಲ್ಲಿ ತಂದು ಸೇರಿಸುವ ಹೀನ ಕೃತ್ಯವು ವೀರಶೈವ ವಾದಿಗಳಿಂದ ನಡೆಯಿತು. ಜಂಗಮ ಎಂಬುದು ವಿಶೇಷ ತತ್ತ್ವವಾಚಕ ಪದ. ಆದರೆ ಅದನ್ನು ಜಾತಿಯನ್ನಾಗಿ ಪರಿವರ್ತಿಸಿದ್ದು ದುರ್ದೈವದ ಸಂಗತಿ. ಇವರ ದೃಷ್ಟಿಯಲ್ಲಿ ಅಯ್ಯನವರು ಮತ್ತು ಬಣಜಿಗರನ್ನು ಬಿಟ್ಟರೆ ಉಳಿದವರೆಲ್ಲ ಕೀಳು. ಗಮನಾರ್ಹ ವಿಷಯವೆಂದರೆ ಬಣಜಿಗ ಅಥವಾ ಶೆಟ್ಟಿ ಲಿಂಗಾಯತರಿಗೂ ಗುರುವಾಗುವ ಅಥವಾ ವಟುವಾಗಿ ಅಧ್ಯಯನ ಮಾಡುವ ಅಧಿಕಾರವನ್ನು ಅವರು ಕೊಡದೇ ಇರುವುದು.

ಲಿಂ. ಹಾನಗಲ್ ಕುಮಾರ ಸ್ವಾಮಿಗಳು ಸ್ಥಾಪಿಸಿರುವ ಶಿವಯೋಗ ಮಂದಿರದಲ್ಲಿ ವಟುಗಳಿಗೆ ಧಾರ್ಮಿಕ ತರಬೇತಿ ಕೊಡುವ ಮತ್ತು ಮಠಾಧೀಶರನ್ನು ತಯಾರು ಮಾಡುವ ಕೇಂದ್ರ ಆರಂಭವಾಯಿತು. ಹುಟ್ಟಿನಿಂದ ಐನೋರ ಅಥವಾ ಜಾತಿ ಜಂಗಮರ ಮಕ್ಕಳಿಗೆ ಮಾತ್ರ ಅಲ್ಲಿ ತರಬೇತಿ ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ. ಅವರನ್ನೇ ತರಬೇತಿಗೊಳಿಸಿ ಮಠಗಳಿಗೆ ಅಧಿಕಾರಿಗಳನ್ನಾಗಿ ಮಾಡುವ ಪದ್ಧತಿ ಆರಂಭಗೊಂಡಿತು. ಜನ್ಮದಿಂದ ಯಾರೂ ಶ್ರೇಷ್ಠರಾಗುವುದಿಲ್ಲ. ಜ್ಞಾನ ಮತ್ತು ಅರ್ಹತೆಯಿಂದ ಶ್ರೇಷ್ಠತೆ ಸಿಗಬೇಕು ಎಂಬುದು ಗುರುಬಸವಣ್ಣನವರ ತತ್ತ್ವ ಆದರೆ ಶಿವಯೋಗ ಮಂದಿರದಲ್ಲಿ ಜಂಗಮರ (ಜಾತಿ) ಮಕ್ಕಳನ್ನು ಹೊರತುಪಡಿಸಿ ಉಳಿದ ಯಾವ ಲಿಂಗಾಯತರಿಗೂ ಗುರುವಾಗುವ ಅಧಿಕಾರ ಅಥವಾ ವಟುವಾಗಿ ತರಬೇತಿ ಪಡೆಯಲಿಕ್ಕೂ ಪ್ರವೇಶ ಕೊಡಲಿಲ್ಲ. ಅಲ್ಲಿ ತರಬೇತಿ ಪಡೆದು ಮಠಾಧೀಶರಾಗುವ ವಟುಗಳೆಲ್ಲರೂ ಒಂದೇ ಜಾತಿಯ ಮತ್ತು ಒಂದಲ್ಲ ಒಂದು ಕಡೆಯಿಂದ ರಕ್ತ ಸಂಬಂಧಿಗಳೇ ಆಗಿರುತ್ತಾರೆ. ಕಾವಿಧಾರಿ ಮಠಾಧೀಶರೇ ನಮಗೆ ಸಾಕಷ್ಟು ಕಡೆ ಹೇಳಿದ್ದಾರೆ. ಧಾರವಾಡ ಸ್ವಾಮಿ ನಮ್ಮ ಚಿಕ್ಕಪ್ಪ, ವಿಜಾಪೂರ ಸ್ವಾಮಿ ನಮ್ಮ ಅಣ್ಣನ ಮಗ, ಹಾವೇರಿಯೊಳಗೆ ನಮ್ಮ ದೊಡ್ಡಪ್ಪನ ಮಗ ಇದ್ದು ಈಗ ಬೇರೆ ಯಾವುದೋ ಮಠಕ್ಕೆ ಆಗಿದ್ದಾರೆ ಹೀಗೆ ಹೇಳುವುದನ್ನು ನಾನು ಸ್ವತಃ ಕೇಳಿದ್ದೇನೆ.

ಅಪವಾದಕ್ಕೆ ಎಂಬಂತೆ ಮೂರು ನಾಲ್ಕು ಜನ ಸ್ವಾಮಿಗಳು ಭಕ್ತ ವರ್ಗಕ್ಕೆ ಸೇರಿದವರು ಶಿವಯೋಗ ಮಂದಿರದಲ್ಲಿ ತರಬೇತಿ ಹೊಂದಿದವರಾಗಿದ್ದು ಅದರಲ್ಲಿ ಪ್ರಮುಖರೆಂದರೆ ಭಾಲ್ಕಿ ಹಿರೇಮಠದ ಪಟ್ಟಾಧ್ಯಕ್ಷರಾಗಿದ್ದ ಡಾ: ಚನ್ನಬಸವ ಪಟ್ಟದ್ದೇವರು. ಶಿವಯೋಗ ಮಂದಿರದಲ್ಲಿ ವಚನ ಸಾಹಿತ್ಯದ ತರಬೇತಿ ಆಗಲಿಲ್ಲವಾದರೂ ನಂತರದಲ್ಲಿ ಬಸವಣ್ಣನವರೆ ಲಿಂಗಾಯತ ಧರ್ಮದ ಸಂಸ್ಥಾಪಕರು ಎಂದು ನಂಬಿ ಬಸವಮಾರ್ಗದಲ್ಲಿ ನಡೆದ ಶತಾಯುಷಿಗಳು ಅವರು.

ಅರಿವು-ಆಚಾರ-ಅನುಭಾವದಿಂದ ಯಾರು ಬೇಕಾದರೂ ಭಕ್ತರಾಗಬಹುದು, ಗುರುವಾಗಬಹುದು, ಜಂಗಮನಾಗಬಹುದು. ಜಗದ್ಗುರುವೂ ಆಗಬಹುದು ಎನ್ನುತ್ತದೆ ವಚನ ಸಾಹಿತ್ಯ. ಆದರೆ, ಅರ್ಹತೆ ಇರಲಿ ಅಥವಾ ಇಲ್ಲದಿರಲಿ ಒಂದು ವಿಶಿಷ್ಟ ಜನಾಂಗದವರಷ್ಟೇ ಸ್ವಾಮಿಗಳು-ಮಠಾಧಿಕಾರಿಗಳು ಆಗಬೇಕೆನ್ನುವುದು ಯಾವ ಸಿದ್ಧಾಂತ ! ಇದು ಬಸವ ತತ್ತ್ವಕ್ಕೆ ದ್ರೋಹ ಬಗೆದಂತಲ್ಲವೇ?

ನಾನು 2002ನೇ ಇಸ್ವಿಯಲ್ಲಿ ಬಸವಕಲ್ಯಾಣದಲ್ಲಿ ಆಯೋಜಿತ ಪ್ರಥಮ

ಕಲ್ಯಾಣಪರ್ವದ ಪ್ರಚಾರಕ್ಕಾಗಿ ಕೂಡಲ ಸಂಗಮದಿಂದ (ಗುರುಬಸವಣ್ಣನವರ ಐಕ್ಯ ಕ್ಷೇತ್ರದಿಂದ) ಜ್ಯೋತಿಯಾತ್ರೆ ತೆಗೆದುಕೊಂಡು ಬರುವಾಗ ವಿಜಾಪೂರ ಜಿಲ್ಲೆಯಲ್ಲಿ ಒಬ್ಬ ಶರಣರ ಮನೆಯಲ್ಲಿ ತಂಗಿದ್ದೆವು. ಅವರ ಹೆಸರು ಪಂಚಾಕ್ಷರಯ್ಯ ಅವರಿಗೆ ನಾಲ್ಕು ಜನ ಮಕ್ಕಳು. ಒಬ್ಬ ಡಾಕ್ಟರ್ ಆಗಿದ್ದಾನೆ, ಇನ್ನೊಬ್ಬ ಮಿಲಿಟರಿಯಲ್ಲಿ ಸೇವೆಯಲ್ಲಿದ್ದಾನೆ. ಮತ್ತೊಬ್ಬ ಪ್ರೌಢಶಾಲೆಯ ಶಿಕ್ಷಕ. ಮೂವರು ಮಕ್ಕಳು ತುಂಬ ಒಳ್ಳೆಯವರು. ಭಕ್ತಿ-ಶ್ರದ್ಧೆಯಿಂದ ಪೂಜೆ-ಪಾಠನೂ ಮಾಡುತ್ತಾರೆ. ಆದರೆ ಈ ಕೊನೆಯ ಮಗ ಮಾತ್ರ ಯಾರ ಮಾತೂ ಕೇಳೋದಿಲ್ಲ ತುಂಬ ಉಡಾಳ. ಊರ ಉಸಾಬರಿ ಮಾಡಿಕೊಂಡು ಓಡಾಡುತ್ತಾನೆ. ವಿದ್ಯೆಯೂ ಕಲಿಯಲಿಲ್ಲ, ಬುದ್ಧಿಯೂ ಇಲ್ಲ. ಆದಕಾರಣ ಶಿವಯೋಗ ಮಂದಿರಕ್ಕೆ ಕಳಿಸಿ ಯಾವುದಾದರೂ ಮಠಕ್ಕೆ ಅಧಿಕಾರಿ ಮಾಡಬೇಕು ಅಂತ ವಿಚಾರ ಮಾಡಿದ್ದೇನೆ. ತಾವೇನಂತೀರಿ ಸ್ವಾಮಿಗಳೇ ಎಂದು ಪಂಚಾಕ್ಷರಯ್ಯ ನಮ್ಮನ್ನು ಕೇಳಿದರು. ಆಗ ನಾನು ಹೇಳಿದೆ, ಇಂಥ ನಿಷ್ಪ್ರಯೋಜಕ ವ್ಯಕ್ತಿಗಳನ್ನೆಲ್ಲ ಮಠಾಧೀಶರನ್ನಾಗಿ ಮಾಡಿದರೆ ಸಮಾಜದ ಗತಿ ಏನು? ಇಂಥವರನ್ನೇ ಮುಗ್ಧ ಭಕ್ತರು ಗುರು ಅಂತ ನಂಬಿ ಗೌರವಿಸಬೇಕೆ? ಎಂದು ಕೇಳಿದೆ. ಆಗ ಮೌನವಾಗಿ ಕುಳಿತು ಬಿಟ್ಟರು. ಬಹುತೇಕ ಮಠಾಧಿಪತಿಗಳು ಇಂದು ಈತರದವರೇ ಇದ್ದುದರಿಂದ ಸಮಾಜದಲ್ಲಿ ಅಜ್ಞಾನ, ಮೌಢ್ಯತೆ, ಕಂದಾಚಾರ ಬೆಳೆದು ನಿಂತಿದೆ. ಮತ್ತು ಧರ್ಮದ ಹೆಸರಿನಲ್ಲಿ ಶೋಷಣೆ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಶ್ರದ್ಧೆ-ನಿಷ್ಠೆ-ಹಾಗೂ ಕಳಕಳಿಯಿಂದ ಧರ್ಮಪ್ರಚಾರ ಮಾಡುವವರು ಇದ್ದಾರೆ. ಆದರೆ ವಿರಳ.

ಅಯ್ಯನವರ ಮಕ್ಕಳನ್ನು ಸೇರಿಸಿಕೊಂಡು ಅಯ್ಯಾಚಾರ ಮಾಡಿಸಿ ನಾಲ್ಕಾರು ವರ್ಷಗಳವರೆಗೆ ಆಗಮದ ಸಂಸ್ಕೃತ ಶ್ಲೋಕಗಳನ್ನು ಕಲಿಸಿ ವೈದಿಕ ಧರ್ಮದ ಪೂಜಾ ವಿಧಿ-ವಿಧಾನಗಳ ಬಗ್ಗೆ ತರಬೇತಿ ಕೊಟ್ಟು ಯಾವುದಾದರೂ ಒಂದು ಮಠಕ್ಕೆ ಅಧಿಕಾರಿಯನ್ನಾಗಿ ಮಾಡಲಾಗುತ್ತದೆ. ಗಮನಾರ್ಹ ವಿಷಯವೆಂದರೆ ವಿರಕ್ತ ಮಠಗಳಿಗೆ ಪಟ್ಟಾಧಿಕಾರ ಮಾಡುವಾಗ ಸ್ವಾಮಿಗಳಿಗೆ ಕಾವಿ ತೊಡಿಸಿ, ಆವುಗೆನೀಡಿ, ಅವರ ಜೋಳಿಗೆಯಲ್ಲಿ ವಚನಗಳ ಕಟ್ಟು ಅಥವಾ ಅಲ್ಲಮ ಪ್ರಭುದೇವರ ಶೂನ್ಯ ಸಂಪಾದನೆ, ಅಥವಾ ಕರಣ ಹಸಿಗೆ ಗ್ರಂಥವನ್ನು ಇಡಲಾಗುತ್ತದೆ. ವಿರಕ್ತಮಾರ್ಗ ನಿರ್ಮಾಪಕರಾದ ಗುರುಬಸವಣ್ಣನವರು ಶೂನ್ಯ ಪೀಠದ ಪ್ರಥಮ ಅಧ್ಯಕ್ಷರನ್ನಾಗಿ ಮಾಡಿದ್ದು ವ್ಯೋಮಕಾಯಸಿದ್ಧ ಅಲ್ಲಮ ಪ್ರಭುದೇವರನ್ನು. ವಿರಕ್ತ ಪರಂಪರೆ ಆರಂಭವಾದದ್ದೇ ಅಲ್ಲಿಂದ. ಆದ್ದರಿಂದ ವಿರಕ್ತ ಸ್ವಾಮಿಗಳ ಪಟ್ಟಾಧಿಕಾರ ಮಾಡಿಸುವಾಗ ಶೂನ್ಯ ಸಂಪಾದನೆ ಗ್ರಂಥವನ್ನೇ ನೀಡುವ ಪರಿಪಾಠ ಸಾಗಿ ಬಂದಿದೆ.

ವಚನ : ಭಕ್ತರ ಭಾವದಲ್ಲಿ ಸುಳಿವ ಸುಳುಹು
ವಿರಕ್ತರ ಜ್ಞಾನದಲ್ಲಿ ಹೊಳೆವ ಕಳೆಯು ನೀನೆಯಯ್ಯಾ
ಸೂರ್ಯನ ಬೆಳಗಿನೊಳಗೆ, ಸಚರಾಚರ ಪ್ರಾಣಿಗಳು ಸುಳಿವಂತೆ
ನಮ್ಮ ಕಟ್ಟಿನ ನೇಮದ ನಿಷ್ಠೆ ನೀನೆಯಯ್ಯಾ
ಅಮರೇಶ್ವರ ಲಿಂಗದ ಒಡಲು ಸಂಗನ ಬಸವಣ್ಣನೆಂಬುದು
ಮಡಿವಾಳ ಮಾಚಿತಂದೆಗಳೆ ಬಲ್ಲರು ಕಾಣಾ ಸಂಗನಬಸವಣ್ಣ.
(ಸಂ.ವ.ಸಂ.-1 ವಚನ 1185)

ಆಯ್ದಕ್ಕಿ ಮಾರಯ್ಯನವರ ಈ ವಚನವು ಅದಕ್ಕೆ ಸಾಕ್ಷಿಯಾಗಿದೆ ಗುರು ಬಸವಣ್ಣನವರ ಮತ್ತು ಅಲ್ಲಮ ಪ್ರಭುದೇವರ ವಚನಗಳನ್ನು ಓದಿ ಬದುಕಿನಲ್ಲಿ ಅಳವಡಿಸಿಕೊಂಡು ನಡೆಯಬೇಕಾದುದು ವಿರಕ್ತರ ಆದ್ಯ ಕರ್ತವ್ಯವಾಗಬೇಕು.

ಲಿಂಗಾಯತ ಧರ್ಮದ ಆಚಾರಗಳು

ಪ್ರತಿಯೊಂದು ಧರ್ಮಕ್ಕೂ ತನ್ನದೆ ಆದ ಸಂವಿಧಾನವಿರುತ್ತದೆ. ಅದೇ ರೀತಿಯಾಗಿ ಲಿಂಗಾಯತ ಧರ್ಮಕ್ಕೆ ವಚನ ಸಾಹಿತ್ಯವೆಂಬ ಸಂವಿಧಾನವಿದೆ. ಅಷ್ಟಾವರಣವೆ ಅಂಗ, ಪಂಚಾಚಾರವೇ ಪ್ರಾಣ ಮತ್ತು ಷಟಸ್ಥಲ ಸಿದ್ಧಾಂತವೇ ಲಿಂಗಾಯತ ಧರ್ಮದ ಆತ್ಮವಾಗಿದೆ. ಭಕ್ತನಾಗಲಿ, ಗುರುವಾಗಲಿ, ಜಂಗಮನೇ ಆಗಿರಲಿ, ಇಷ್ಟಲಿಂಗವನ್ನು ಧರಿಸಿದ ಪ್ರತಿಯೊಬ್ಬರೂ ಕೂಡ ಈ ತತ್ತ್ವಗಳನ್ನು ಅನುಸರಿಸಲೇಬೇಕೆಂಬುದು ಲಿಂಗಾಯತ ಧರ್ಮದ ಕಾಯ್ದೆ. ಕಾಯ್ದೆಯ ವಿರುದ್ಧ ನಡೆದು ಕೊಂಡವರು ಎಷ್ಟೇ ದೊಡ್ಡವರಿದ್ದರೂ ಧರ್ಮದ ದೃಷ್ಟಿಯಲ್ಲಿ ಅವರು ಅಪರಾಧಿಗಳೆ.

ಅನುಭವ ಮಂಟಪದ ಅತ್ಯಂತ ಕಿರಿಯ ವಯಸ್ಸಿನ ಶರಣ ಹಾಗೂ ಚಿನ್ಮಯಜ್ಞಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಚನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಪಂಚಾಚಾರದ ಆಚರಣೆಯ ಕುರಿತು ಹೀಗೆ ಹೇಳಿದ್ದಾರೆ.

ವಚನ : ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರವೆಂಬ
ಪಂಚಾಚಾರದ ಆಚರಣೆಯೆಂತೆಂದಡೆ,
ಲಿಂಗವಲ್ಲದೆ ಅನ್ಯವನರಿಯದಿಹುದೆ ಲಿಂಗಾಚಾರ :
ಸಜ್ಜನ ಕಾಯಕದಲ್ಲಿ ತಂದು ಗುರುಲಿಂಗ ಜಂಗಮಕ್ಕೆ ನೀಡಿ
ಸತ್ಯ ಶುದ್ಧನಾಗಿಹುದೆ ಸದಾಚಾರ :
ಶಿವಭಕ್ತರಲ್ಲಿ ಕುಲ ಗೋತ್ರ ಜಾತಿ ವರ್ಣಾಶ್ರಮವನರಸದೆ
ಅವರೊಕ್ಕುದ ಕೊಂಬುದೆ ಶಿವಾಚಾರ
ಶಿವಾಚಾರದ ನಿಂದೆಯ ಕೇಳದಿಹುದೇ ಗಣಾಚಾರ
ಶಿವಶರಣರೆ ಹಿರಿಯರಾಗಿ ತಾನೆ ಕಿರಿಯನಾಗಿ
ಭಯ ಭಕ್ತಿಯಿಂದ ಆಚರಿಸುವುದೇ ಭೃತ್ಯಾಚಾರ
ಇಂತೀ ಪಂಚಾಚಾರವುಳ್ಳ ಭಕ್ತರ ಒಕ್ಕುದನಿಕ್ಕಿ ಸಲಹಯ್ಯಾ
ಪ್ರಭುವೆ ಕೂಡಲ ಚನ್ನಸಂಗಮದೇವಾ "

ಈ ಎಲ್ಲ ತತ್ತ್ವವನ್ನು ಅರಿತು ಆಚರಿಸುವುದರ ಜೊತೆಗೆ ಪ್ರಚಾರ ಮಾಡುವಂಥವರನ್ನು ಮಾತ್ರ ಗುರು ಅಥವಾ ವಿರಕ್ತರು ಎನ್ನಲು ಸಾಧ್ಯ. ಗುರು ವರ್ಗದವರು ನಾವು ಹೆಚ್ಚು ಅನ್ನುವುದು, ವಿರಕ್ತರು ತಾವು ಶ್ರೇಷ್ಠ ಎನ್ನುವುದು ಮತ್ತು ಜಗಳ ಆಡುವುದು ನಮ್ಮ ಸಮಾಜದಲ್ಲಿ ಸರ್ವ ಸಾಮಾನ್ಯ. ಬಸವಣ್ಣನಿಲ್ಲದೆ ಗುರು ಇಲ್ಲ ಲಿಂಗವೂ ಇಲ್ಲ. ಜಂಗಮವೂ ಇಲ್ಲ ಅಂದಮೇಲೆ ತಾವು ಹೆಚ್ಚು, ತಾವು ಹೆಚ್ಚು ಎಂದು ವಾದ-ವಿವಾದ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಗುರುವರ್ಗದವರು ಹಾಗೂ ವಿರಕ್ತರು ಉಭಯತರೂ ಗುರು ಬಸವಣ್ಣನವರನ್ನು ಹಾಗೂ ಅವರು ಕೊಟ್ಟ ವಚನ ಸಂಹಿತೆಯನ್ನು ಮರೆತಿರುವುದರಿಂದ ಈ ಕಲಹ ನಡೆಯುತ್ತಿದೆ. ನಾವೆಲ್ಲರೂ ಲಿಂಗಾಯತ ಧರ್ಮದ ಪ್ರಚಾರಕರು. ವಿಶ್ವಗುರು ಬಸವಣ್ಣನವರೆ ಈ ಧರ್ಮದ ಸಂಸ್ಥಾಪಕರು ಎಂದು ನಂಬಿ ಬಸವ ಮಾರ್ಗದಲ್ಲಿ ನಡೆದದ್ದೇ ಆದರೆ ಇಂಥ ಕಲಹಕ್ಕೆ ಅವಕಾಶವೇ ಇರುತ್ತಿರಲಿಲ್ಲ.

ಓರ್ವ ಲಿಂಗಾಯತೇತರ ಶರಣರು ಗುರುಬಸವಣ್ಣನವರ ಬಗ್ಗೆ ಅನೇಕ ತ್ರಿಪದಿಗಳನ್ನು ಬರೆದಿದ್ದಾರೆ. ಅದರಲ್ಲಿ ಒಂದು ಹೀಗಿದೆ.

ಎಲ್ಲಿ ವೀರಶೈವ ಅಲ್ಲಿ ಗೊಂದಲದ ವೈಭವ
ಅದು ಅವರ ಸ್ವಭಾವ, ಕಾರಣ

ಅಲ್ಲಿ ಬಸವಣ್ಣನ ಅಭಾವ.

ಅವರು ಜನ್ಮದಿಂದ ಬೇರೆ ಜನಾಂಗದವರು. ಲಿಂಗಾಯತ ಧರ್ಮ ಹಾಗೂ ಗುರುಬಸವಣ್ಣನವರ ಬಗ್ಗೆ ಅಪಾರವಾದ ಅಭಿಮಾನ ಹೊಂದಿದವ ರಾಗಿದ್ದರು. ವೀರಶೈವವಾದಿಗಳು ಗುರು ಬಸವಣ್ಣನವರನ್ನು ಉದಾಸೀನ ಮಾಡಿ ತಾವೇ ಮೆರೆಯಲು ಹೊರಟಿದ್ದೆ ಈ ಎಲ್ಲ ಗೊಂದಲಕ್ಕೆ ಕಾರಣವಾಗಿದೆ ಎಂಬ ಮಾತನ್ನು ಲಿಂಗಾಯತೇತರ ಸಾಹಿತಿಗಳೊಬ್ಬರು ಹೇಳಿರುವುದು ಗಮನಾರ್ಹವಾಗಿದೆ.

ವಿರಕ್ತಮಾರ್ಗ ನಿರ್ಮಾಪಕರು, ಶೂನ್ಯ ಪೀಠದ ಸಂಸ್ಥಾಪಕರೂ ಆಗಿರುವ ಶ್ರೀಗುರು ಬಸವಣ್ಣನವರು, ಶೂನ್ಯ ಪೀಠದ ಅಧ್ಯಕ್ಷರಾದ ವೈರಾಗ್ಯನಿಧಿ ಅಲ್ಲಮಪ್ರಭುದೇವರು, ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು, ಲಿಂಗಾಂಗಯೋಗಿ ಸಿದ್ಧರಾಮೇಶ್ವರರು ಕ್ರಾಂತಿಗಂಗೋತ್ರಿ ಅಕ್ಕನಾಗಲಾಂಬಿಕೆ, ವೀರಗಣಾಚಾರಿ ಮಡಿವಾಳ ಮಾಚಿದೇವರು ಮತ್ತು ಆಧ್ಯಾತ್ಮ ತರಂಗಿಣಿ ಅಕ್ಕಮಹಾದೇವಿ ಪ್ರಮುಖವಾಗಿ ಈ ಸಪ್ತಗಣಾಧೀಶರಲ್ಲದೆ ಇನ್ನೂ ಅನೇಕ ಶರಣ ಶರಣೆಯರು ಚಿಂತನೆಗೈದು ನಮಗೆ ಸಂವಿಧಾನವನ್ನು ಕೊಟ್ಟಿದ್ದಾರೆ. ಇವರೆಲ್ಲ ನಮ್ಮ ಸಂವಿಧಾನ ಕರ್ತೃಗಳು. ಆದಿ ಶರಣರು ನೀಡಿರುವ ಪವಿತ್ರವಾದ ವಚನ ಸಾಹಿತ್ಯವೆ ನಮಗೆ ಸಂವಿಧಾನ ಎಂಬ ನಂಬಿಕೆ ಗುರು ವಿರಕ್ತರಾದಿಯಾಗಿ ಪ್ರತಿಯೊಬ್ಬ ಲಿಂಗಾಯತರಿಗೂ ಇರಬೇಕು.

"ತಾಯಿಯ ಮೊಲೆ ಹಾಲು ವಿಷವಾಗಿ ಕೊಲುವಡೆ......?"

ಲಿಂಗವನಲ್ಲದೆ ಅನ್ಯವನರಿಯದಿಹುದೆ ಲಿಂಗಾಚಾರ ಎಂದು ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ಹೇಳುತ್ತಾರೆ. ಗುಡಿ-ಗುಂಡಾರ ಸ್ಥಾಪನೆ, ಉದ್ಘಾಟನೆ ಮತ್ತು ಗುರು-ಲಿಂಗ-ಜಂಗಮದ ಹೊರತು ಅನ್ಯ ದೈವಗಳ ಪೂಜೆ ಮಾಡುವವರ ಕುರಿತು ಇತರ ಶರಣರು ಏನು ಹೇಳಿದ್ದಾರೆ ನೋಡೋಣ.

ಇರುವ ಒಬ್ಬನೆ ದೇವನನ್ನು ಇಷ್ಟಲಿಂಗದ ರೂಪದಲ್ಲಿ ಪೂಜಿಸುತ್ತೇನೆಂದು ಪ್ರತಿಜ್ಞೆ ಸ್ವೀಕರಿಸಿ ಲಿಂಗಾಯತನಾದ ಬಳಿಕ ಇತರೆ ಕಾಕು-ಪೋಕು ದೇವತೆಗಳ ಪೂಜೆ ಸಲ್ಲ ಎಂದು ಧರ್ಮಪಿತ ಬಸವಣ್ಣನವರು ಆದೇಶಿಸಿದ್ದಾರೆ.

ವಚನ : ದೇವನೊಬ್ಬ ನಾಮ ಹಲವು
ಪರಮ ಪತಿವ್ರತೆಗೆ ಗಂಡನೊಬ್ಬ
ಮತ್ತೊಂದಕ್ಕೆರಗಿದಡೆ ಕಿವಿ, ಮೂಗ, ಕೊಯ್ವನು,
ಹಲವು ದೈವದ ಎಂಜಲ ತಿಂಬವರನೇನೆಂಬೆ ಲಿಂಗದೇವಾ ?

ಗೃಹಿಣಿಯಾದವಳು ತನ್ನ ಗಂಡನನ್ನು ಬಿಟ್ಟು ಇತರ ಪುರುಷನ ಸಂಗ ಬಯಸಿದರೆ ಗಂಡನು ಕಿವಿ, ಮೂಗ, ಕೊಯ್ಯದೆ ಬಿಡುವನೆ? ಹಾಗೆಯೇ ಹಲವು ದೈವದ ಎಂಜಲ ತಿಂಬವರನ್ನು ಸೃಷ್ಟಿಕರ್ತ ಲಿಂಗದೇವನು ಶಿಕ್ಷಿಸದೆ ಬಿಡಲಾರ ಎಂದು ಗುರುಬಸವಣ್ಣನವರು ಅತ್ಯಂತ ಕಳಕಳಿಯಿಂದ ನಮಗೆ ಉಪದೇಶಿಸಿದ್ದಾರೆ.

"ಬೇಡ ಬೇಡ ಪರದೈವದ ಸಂಗ ಹೊಲ್ಲ"

ಬೇಡ ಬೇಡ ಪರದೈವವೆಂಬುದು ಹಾದರ ಕಾಣಿರೋ ಎಂದು ಗುರುಬಸವಣ್ಣನವರು ತಮ್ಮ ಇನ್ನೊಂದು ವಚನದ ಮೂಲಕ ನಮ್ಮನ್ನು ಎಚ್ಚರಿಸಿದ್ದಾರೆ.

ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ ಸ್ಥಾವರ ದೈವಕ್ಕೆರಗಲಾಗದು, ಕರಸ್ಥಲದ ದೇವನಿದ್ದಂತೆ ಧರೆಯ ಮೇಲಣ ಪ್ರತಿಷ್ಠೆಗೆರಗಲಾಗದು. ಹೀಗೆ ನಾನಾ ರೀತಿಯಲ್ಲಿ ನಮಗೆ ಧರ್ಮಪಿತರು ಮಾರ್ಗದರ್ಶನ ಮಾಡಿದ್ದಾರೆ.

ವೀರವಿರಾಗಿಣಿ ಅಕ್ಕಮಹಾದೇವಿಯುವರು ತಮ್ಮ ಈ ಕೆಳಗಿನ ವಚನದಲ್ಲಿ ಲಿಂಗಾಯತರು ಹೇಗಿರಬೇಕು? ಸ್ಥಾವರಲಿಂಗ ಪೂಜೆಯಿಂದ ಏನಾಗುವುದು ಎಂಬುದನ್ನು ಮಾರ್ಮಿಕವಾಗಿ ಹೇಳಿದ್ದಾರೆ.

ವಚನ : ಹಾಲಹಿಡಿದು ಬೆಣ್ಣೆಯನರಸಲುಂಟೆ ?
ಲಿಂಗವಿಡಿದು ಪುಣ್ಯಕ್ಷೇತ್ರಕ್ಕೆ ಹೋಗಲುಂಟೆ ?
ಲಿಂಗದ ಪಾದ ತೀರ್ಥ ಪ್ರಸಾದವ ಕೊಂಡು
ಅನ್ಯಬೋಧೆ, ಅನ್ಯ ಶಾಸ್ತ್ರಕ್ಕೆ ಹಾರೈಸಲೇತಕ್ಕೆ ?
ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದಡೆ
ತಡೆಯದೆ ಹುಟ್ಟಿಸುವನು ಶ್ವಾನನ ಗರ್ಭದಲ್ಲಿ
ಇದನರಿತು ಗುರುಕೊಟ್ಟ ಲಿಂಗದಲ್ಲಿಯೇ ಎಲ್ಲಾ ತೀರ್ಥಂಗಳೂ
ಎಲ್ಲ ಕ್ಷೇತ್ರಂಗಳು ಇದ್ದಾವೆಂದು ಭಾವಿಸಿ ಮುಕ್ತರಪ್ಪುದಯ್ಯ
ಇಂತಲ್ಲದೆ, ಗುರುಕೊಟ್ಟಲಿಂಗವ ಕಿರಿದು ಮಾಡಿ
ತೀರ್ಥಲಿಂಗವ ಹಿರಿದು ಮಾಡಿ ಹೋದಾತಂಗೆ
ಅಘೋರ ನರಕ ತಪ್ಪದು ಕಾಣಾ ಚನ್ನಮಲ್ಲಿಕಾರ್ಜುನಾ

ಹಾಲನ್ನು ಕೈಯಲ್ಲಿ ಹಿಡಿದುಕೊಂಡು ಬೆಣ್ಣೆ ಹುಡುಕುವ ಅಗತ್ಯವಿದೆಯೇ? ಇಲ್ಲ. ಹಾಲಿಗೆ ಹೆಪ್ಪಿಟ್ಟು ಬೆಣ್ಣೆಯನ್ನು ತಯಾರಿಸಬಹುದು. ಇಷ್ಟಲಿಂಗವೆಂಬ ಹಾಲನ್ನು ತಮ್ಮಲ್ಲಿಯೇ ಇಟ್ಟುಕೊಂಡು; ಪರಮಸುಖ ಪರಮಾನಂದದ ಬೆಣ್ಣೆಯನ್ನು ಪಡೆಯಲರಿಯದೆ, ಮೂಢರು ಹಲವು ದೈವ- ಹಲವು ಪುಣ್ಯಕ್ಷೇತ್ರಗಳಲ್ಲಿ ಪರಮಸುಖ ಅಥವಾ ಪರಮಾತ್ಮನನ್ನು ಕಾಣಲು ಪ್ರಯತ್ನಿಸುವರು. ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದಡೆ ಸೃಷ್ಟಿಕರ್ತ ಲಿಂಗದೇವನು ನಮ್ಮನ್ನು ನಾಯಿ ಜನ್ಮಕ್ಕೆ ದೂಡುವನು. ಗುರು ಕೊಟ್ಟ ಲಿಂಗದಲ್ಲಿಯೇ ಎಲ್ಲ ತೀರ್ಥಗಳು, ಎಲ್ಲ ಕ್ಷೇತ್ರಂಗಳೂ ಇದ್ದಾವೆಂದು ಭಾವಿಸಬೇಕು. ಇಷ್ಟಲಿಂಗವನ್ನು ಉದಾಸೀನ ಮಾಡಿ ಸ್ಥಾವರಲಿಂಗಕ್ಕೆ ಹೋದಡೆ ಅಘೋರ ನರಕ ತಪ್ಪದು ಎಂದು ಅಕ್ಕಮಹಾದೇವಿ ತಾಯಿಯವರು ಎಚ್ಚರಿಸಿದ್ದಾರೆ.

ಲಿಂಗಾಯತ ಧರ್ಮದ ಪ್ರಕಾರ ಗುರು-ಲಿಂಗ-ಜಂಗಮದ ಹೊರತು ಅನ್ಯದೈವಗಳ ಪೂಜೆ ನಿಷಿದ್ಧ. ವಚನ ಸಾಹಿತ್ಯವನ್ನು ಅರಿಯದ ಮುಗ್ಧ ಜನರು ಹಲವು ದೇವತೆಗಳ ಪೂಜೆ ಮಾಡುತ್ತಾರೆ. ಇದು ಅಪರಾಧವಾದರೂ ಕ್ಷಮ್ಯ ಆದರೆ ಅರಿತವರಾಗಿ ಮಠಾಧೀಶರು ವಿವಿಧ ದೇವತೆಗಳ ಪೂಜೆ, ಶನಿ ಮುಂತಾದ ನವಗ್ರಹಗಳ, ಮಾರಿ ಮಸಣಿಯ ಗುಡಿಗಳ ಉದ್ಘಾಟನೆ,, ಗಣಪ ಮತ್ತು ಹನುಮಪ್ಪನ ಮೂರ್ತಿಗಳಿಗೆ ಪ್ರಾಣ ಪ್ರತಿಷ್ಠಾಪನೆ ಮಾಡುವರು. ಇದು ಅಕ್ಷಮ್ಯ ಅಪರಾಧ. ತಾಯಿಯ ಮೊಲೆ ಹಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರುವೆನಯ್ಯಾ? ಎಂದು ಧರ್ಮಗುರು ಬಸವಣ್ಣನವರು ಇಂಥ ಮಠಾಧೀಶರನ್ನು ನೋಡಿಯೇ ಹೇಳಿರಬಹುದೆನಿಸುತ್ತದೆ. ತತ್ತ್ವದ ರಕ್ಷಕರೆ ಭಕ್ಷಕರಾದಾಗ ಏನು ಹೇಳುವುದು ? ತತ್ತ್ವನಿಷ್ಠೆಯನ್ನು ಬೆಳೆಸಬೇಕಾದವರೆ ತತ್ತ್ವ ಭೃಷ್ಟರಾದರೆ ಅವರನ್ನು ಸುಧಾರಿಸುವುದೆಂತು!

ವೀರಗಣಾಚಾರಿ ಮಡಿವಾಳ ಮಾಚಿದೇವರು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ವಚನ : ಉಡಿಯ ಲಿಂಗವ ಬಿಟ್ಟು
ಗುಡಿಯ ಲಿಂಗಕ್ಕೆ ಶರಣೆಂಬ
ಮತಿ ಭೃಷ್ಟರನೇನೆಂಬೆನಯ್ಯಾ
ಕಲಿದೇವರ ದೇವಾ ! (ಸಂವಸ-3, ವಚನ-519)

ಉಡಿಯಲಿಂಗ ಅಂದರೆ ಕಾಯ-ಮನ-ಭಾವದಲ್ಲಿರುವ; ಗುರುವಿನ ಮೂಲಕ ಇಷ್ಟಲಿಂಗವಾಗಿ ಕರಸ್ಥಲಕ್ಕೆ ಬಂದ ದೇವನ ಕುರುಹು. ಗುಡಿಯಲಿಂಗ ಅಂದರೆ ಸ್ಥಾವರಲಿಂಗ: ವಿಶ್ವಚೇತನ ಪ್ರಭುವಾಗಿರುವ ಸರ್ವಶಕ್ತ ಸರ್ವವ್ಯಾಪಿ ಪರಮಾತ್ಮನೆ ಇಷ್ಟಲಿಂಗದ ರೂಪದಲ್ಲಿ

ಉಡಿಯಲಿಂಗವಾಗಿರುವಾಗ ಸ್ಥಾವರ ಗುಡಿಯ ಲಿಂಗಕ್ಕೆ ಶರಣೆಂಬುವರನ್ನು ಮತಿಭ್ರಷ್ಟರೆಂದು ಮಡಿವಾಳ ಮಾಚಿದೇವರು ಚಾಟಿ ಏಟು ಕೊಡುತ್ತಾರೆ. ಇಂಥ ಮತಿಭ್ರಷ್ಟರನ್ನೇ ಇಂದು ನಮ್ಮ ಸಮಾಜದಲ್ಲಿಯ ಬಹುತೇಕ ಮುಗ್ಧ ಭಕ್ತರು ಗುರುಗಳೆಂದು ಭಾವಿಸಿದ್ದಾರೆ. ಬಳ್ಳಿಗುರುಡರು ಸೇರಿ ಹಳ್ಳವನು ಬಿದ್ದಂತೆ ನಮ್ಮ ಸಮಾಜದ ಪರಿಸ್ಥಿತಿಯಾಗಿದೆ.

ವೀರಶೈವ ಎಂದರೇನು ?

ಶ್ರೀ ಗುರು ಬಸವಣ್ಣನವರಿಂದ ಸಂಸ್ಥಾಪಿಸಲ್ಪಟ್ಟ ಸ್ವತಂತ್ರ ಸ್ವಾವಲಂಬಿ ಹಾಗೂ ಪರಿಪೂರ್ಣ ಧರ್ಮವಾಗಿರುವ ಲಿಂಗಾಯತ ಧರ್ಮ ಮತ್ತು ತತ್ತ್ವ ಸಿದ್ಧಾಂತಗಳ ಬಗ್ಗೆ ನಾವು ತಿಳಿದಿದ್ದೇವೆ. ಈಗ ಈ ವೀರಶೈವ ಎಂಬುದು ಎಲ್ಲಿಂದ ಬಂತು? ಬೇತಾಳದಂತೆ ಏಕೆ ನಮ್ಮ ಸಮಾಜಕ್ಕೆ ಗಂಟುಬಿದ್ದಿದೆ. ಎಂಬುದನ್ನು ತಿಳಿಯಬೇಕಾದ್ದು ಅಗತ್ಯವಾಗಿದೆ. ಲಿಂಗಾಯತ ಧರ್ಮಕ್ಕೂ ಮತ್ತು ವೀರಶೈವ ಪದಕ್ಕೂ ಯಾವ ಸಂಬಂಧವೂ ಇಲ್ಲ. ಸುಮಾರು 10 ಸಾವಿರ ವರ್ಷಗಳ ಹಿಂದೆ ಈ ದೇಶದಲ್ಲಿ ಒಬ್ಬ ಮಹಾನ್‌ಯೋಗಿ ಆಗಿ ಹೋಗಿದ್ದಾನೆ. ಅವನೇ ಮಹಾತ್ಮ ಯೋಗಿ ಶಿವಾ, ಶಿವನೇ ಜಗತ್ತಿನ ಪ್ರಪ್ರಥಮ ಯೋಗಿ. ಶಿವನ ಹೆಂಡತಿ ಪಾರ್ವತಿಯೂ ಯೋಗಿಣಿಯಾಗಿದ್ದಳು. ದೆಹಲಿ, ಹರಯಾಣ, ಉತ್ತರಪ್ರದೇಶ, ಹಿಮಾಚಲ ಪ್ರದೇಶ ಅರುಣಾಚಲ ಪ್ರದೇಶ ಮುಂತಾದ ಉತ್ತರಭಾರತದ ಪ್ರದೇಶಗಳಲ್ಲಿ ಸಾಮಾನ್ಯ ವ್ಯಕ್ತಿಗಳಿಗೂ ಕೂಡ ಶಿವ ಒಬ್ಬ ಯೋಗಿ ಪುರುಷ, ಮಹಾತ್ಮ, ಎಂಬುದರ ಅರಿವಿದೆ. ಶೈವ ಧರ್ಮವನ್ನು ಸ್ಥಾಪಿಸಿದ ಮೂಲ ಪುರುಷ ಮತ್ತು ಓಂಕಾರ ಹಾಗೂ ರುದ್ರಾಕ್ಷಿಗಳ ಆವಿಷ್ಕಾರವಾಗಿದ್ದು ಯೋಗಿ ಪುರುಷ ಶಿವನಿಂದಲೆ ಎಂಬುದು ಸರ್ವವಿದಿತ. ಆದರೆ ದುರ್ದೈವದ ಸಂಗತಿಯೆಂದರೆ ದಕ್ಷಿಣ ಭಾರತದಲ್ಲಿ ಶಿವ-ಪಾರ್ವತಿಯರೆ ಈ ಸೃಷ್ಟಿಯ ಉಗಮಕ್ಕೆ ಕಾರಣಕರ್ತರು ಎಂದು ನಂಬಿ ಉಭಯತರನ್ನು ಕಾಲ್ಪನಿಕ ದೇವತೆಯನ್ನಾಗಿ ಪೂಜಿಸಲ್ಪಡುವುದು. ದೇವರು ನಿರಾಕಾರ, ನಿರ್ಗುಣ, ನಿರಂಜನ, ಜನನ ಮರಣ ರಹಿತನು, ಮಾತಾಪಿತ ರಹಿತನು ಎಂಬ ಮಾತನ್ನು ವೇದ, ಉಪನಿಷತ್ತುಗಳೆಲ್ಲದರಲ್ಲಿಯೂ, ಪ್ರತಿಪಾದಿಸಲ್ಪಟ್ಟಿದೆ. ಗುರು ಬಸವಣ್ಣನವರು ತಮ್ಮ ಒಂದು ವಚನದಲ್ಲಿ 'ಲಿಂಗದೇವನಲ್ಲದೆ ಇಲ್ಲವೆಂದಿತ್ತು ವೇದ' ಎಂದು ಉದಾಹರಿಸಿದ್ದಾರೆ. ವೇದ ಉಪನಿಷತ್ತುಗಳು ದೇವರು ಒಬ್ಬನೆ ಎಂದು ಒಪ್ಪಿದರೂಕೂಡ ಆತನನ್ನು ತ್ರಿಕರಣ ಪೂರ್ವಕವಾಗಿ ಪೂಜಿಸುವ ವಿಧಾನ ತಿಳಿಸಲಿಲ್ಲ. ಹೀಗಾಗಿ ಜನರು ತಮಗಿಷ್ಟವಾದ ಆಕಾರವನ್ನು ರೂಪಿಸಿಕೊಂಡು, ಕಲ್ಪಿಸಿಕೊಂಡು ಉಪಾಸಿಸಲು ಆರಂಭಿಸಿದರು. ಆದರೆ ಗುರುಬಸವಣ್ಣನವರು ವಿಶ್ವದ ಆಕಾರದಲ್ಲಿಯೇ ವಿಶ್ವಾತ್ಮನನ್ನು ಪೂಜಿಸಬೇಕು, ಗಿಡ-ಮರಗಳನ್ನು ಪ್ರಾಣಿ ಪಕ್ಷಿಗಳನ್ನು ಪೂಜಿಸುವುದರಿಂದ ಸೃಷ್ಟಿಕರ್ತನ ಸರ್ವವ್ಯಾಪಕತ್ವಕ್ಕೆ ಚ್ಯುತಿ ಬರುತ್ತದೆ ಎಂದು ಸಾರಿ ಗೋಳಾಕಾರದ ಇಷ್ಟಲಿಂಗವನ್ನು ನೀಡಿದರು. ಇದನ್ನು ದೀಕ್ಷೆಯ ಮೂಲಕ ಧರಿಸಿಕೊಂಡು ಪೂಜಿಸುವವರೆಲ್ಲರೂ ಲಿಂಗಾಯತರು.

ಕರ್ನಾಟಕದಲ್ಲಿರುವ ಲಿಂಗಾಯತರ್‍ಯಾರೂ ವೀರಶೈವರಲ್ಲ. ಶಿವನಲ್ಲಿ ವೀರತಮವಾದ ಭಕ್ತಿಯುಳ್ಳವರು ಯಾರೋ ಅವರು ವೀರಶೈವರು ಎಂದು ವ್ಯಾಖ್ಯಾನಿಸಲಾಗುತ್ತದೆ. ಯೋಗಿ ಶಿವನು ಬೇರೆ, ಸೃಷ್ಟಿಕರ್ತ ಪರಮಾತ್ಮ ಬೇರೆ ಎಂಬುದನ್ನು ನಾವು ಮೊದಲು ಅರಿಯಬೇಕು. ಶಿವನ ಅಥವಾ ಅವನ ಕುರುಹಾದ ಸ್ಥಾವರಲಿಂಗ ಪೂಜೆ ಮಾಡುವವರು ಶೈವರು. ಶೈವರಲ್ಲಿ ಪ್ರಮುಖವಾಗಿ ಏಳು ಪ್ರಭೇದಗಳಿವೆ. ಆಪೈಕಿ ವೀರಶೈವವೂ ಒಂದು. ಯೋಗಿ ಶಿವನ ಕುರುಹಾದ ಸ್ಥಾವರಲಿಂಗದ ಆಕಾರದ ಚಿಕ್ಕ ಲಿಂಗವನ್ನು ಶೈವ ಗುರುಗಳು ತಮ್ಮ ಶಿಷ್ಯರಿಗೆ ದೀಕ್ಷೆಯ ಮೂಲಕ ಕೊಡುತ್ತಿದ್ದರು. ಅದು ನಿರಾಕಾರ ದೇವನ ಕುರುಹಾಗಿರಲಿಲ್ಲ. ಒಂದು

ಭಕ್ತಿಯ ಸಾಧನವನ್ನಾಗಿ ಬಳಸಲಾಗುತ್ತಿತ್ತು. ಆ ಲಿಂಗವನ್ನು ಪಡೆದ ನಂತರ ಭಕ್ತರ ಪೂರ್ವದ ಜಾತಿ ಅಳಿಯುತ್ತಿರಲಿಲ್ಲ. ಬ್ರಾಹ್ಮಣರು ಲಿಂಗವನ್ನು ಪಡೆದಾಗ ಬ್ರಾಹ್ಮಣ ವೀರಶೈವರಾಗುತ್ತಿದ್ದರು ಅವರನ್ನು ಮಾಹೇಶ್ವರರು ಎಂದೂ ಕರೆಯಲಾಗುತ್ತಿತ್ತು. ಶೂದ್ರರು ಪಡೆದರೆ ಶೂದ್ರ ವೀರಶೈವರೆಂದು ಕರೆಯಲ್ಪಡುತ್ತಿದ್ದರು. ಆದರೆ ಲಿಂಗಾಯತ ಧರ್ಮದಲ್ಲಿ ಹಾಗಲ್ಲ. ಸೃಷ್ಟಿಕರ್ತನ ಕುರುಹಾದ ಇಷ್ಟಲಿಂಗವನ್ನು ಧರಿಸಿದ ನಂತರ ಅಥವಾ ದೀಕ್ಷೆ ಹೊಂದಿದ ನಂತರ ಪೂರ್ವದ ಜಾತಿ ಅಳಿಯುತ್ತದೆ. ನರಜನ್ಮ ಕಳೆದುಕೊಂಡು ಹರಜನ್ಮ ಪಡೆದ ಮೇಲೆ ಎಲ್ಲರೂ ಸಮಾನರು, ದೇವನೊಬ್ಬನೆ ತಂದೆ ಮನುಜರೆಲ್ಲರೂ ಒಂದೆ ಇದು ಗುರುಬಸವ ಪ್ರಣೀತ ಲಿಂಗಾಯತ ಧರ್ಮದ ಸಿದ್ಧಾಂತ.

ವೀರಶೈವರು ಮೂಲತಃ ಶಿವನ ಪೂಜಕರಾಗಿದ್ದರೂ ವೈದಿಕ ಧರ್ಮದ ಪ್ರಭಾವದಿಂದಾಗಿ ಶಿವನನ್ನಲ್ಲದೆ ಅನ್ಯ ಕಾಕು-ಪೋಕು ದೇವತೆಗಳನ್ನು ಪೂಜಿಸುವರು. ಗುರು ಬಸವಣ್ಣನವರು ಅಂಥ ಆಚರಣೆಗಳ ಬಗ್ಗೆ ತಮ್ಮ ವಚನಗಳಲ್ಲಿ ಅನೇಕ ಕಡೆ ಖಂಡಿಸಿದ್ದಾರೆ. ಚನ್ನಬಸವಣ್ಣನವರು ಮತ್ತು ಅಂಬಿಗರ ಚೌಡಯ್ಯನವರಾದಿಯಾಗಿ ಅನೇಕ ಶರಣರು ವೀರಶೈವರ ಶುಷ್ಕಾಚರಣೆ ಹಾಗೂ ಮೇಲು-ಕೀಳು ಎಂಬ ಭೇದಭಾವ ಮುಂತಾದವನ್ನು ತೀವ್ರವಾಗಿ ಖಂಡಿಸಿದ್ದಾರೆ.

ಪ್ರತಿಷ್ಠಾಪಿಸಿದ ಲಿಂಗ ಅಥವಾ ಯೋಗಿ ಶಿವನ ಕುರುಹಾದ ಸ್ಥಾವರಲಿಂಗವನ್ನು ಶೈವರು-ವೀರಶೈವರು ಪೂಜಿಸುತ್ತಿದ್ದರು. ಗುರುಬಸವಣ್ಣನವರು ಏಕದೇವೋಪಾಸನೆಯ ತತ್ತ್ವವನ್ನು ನೀಡಿ ಇಷ್ಟಲಿಂಗದ ರೂಪದಲ್ಲಿ ದೇವರನ್ನು ಪೂಜಿಸಲು ಹೇಳಿದರು. ಆದ್ದರಿಂದ ಇಷ್ಟಲಿಂಗ ಪೂಜೆಗೆ ದೇವಪೂಜೆ ಎಂದು ಹೇಳಲಾಗಿದೆ. ಗುರು ಬಸವಣ್ಣನವರು "ದೇವಪೂಜೆಯ ಮಾಟ ದುರಿತ ಬಂಧನದೋಟ" ಎಂದು ಹೇಳಿದ್ದಾರೆ.

ಸರಳವಾಗಿ ಹೇಳೋದಾದರೆ, ವೀರಶೈವ ಎಂದರೆ ರೇಶನ್ ಅಕ್ಕಿಯಿದ್ದಂತೆ ಉಸುಕು, ಭತ್ತ, ಎಲ್ಲವುಗಳ ಮಿಶ್ರಣವಾಗಿದೆ. ತಾತ್ತ್ವಿಕ ಶುದ್ಧಿಯಿಲ್ಲ ಆದರೆ ಲಿಂಗಾಯತ ಧರ್ಮ ಅಥವಾ ವಚನ ಸಾಹಿತ್ಯವು ಮಿಲ್‌ನಿಂದ ಪ್ಯಾಕ್ ಆಗಿ ಬಂದಿರುವ ಅಕ್ಕಿ ಮೂಟೆಯಿದ್ದಂತೆ. ತಮಿಳುನಾಡಿನ ಅನೇಕ ಕಡೆಗಳಲ್ಲಿ ವೀರಶೈವ ಮಠಗಳಲ್ಲಿ ಶೈವ ಧರ್ಮದ 63 ಪುರಾತನರ ಫೋಟೊಗಳನ್ನು ಹಾಕಿರುತ್ತಾರೆ. ತಿರುವಳ್ಳುವರ್ ಮತ್ತು ತಿರುವಾಚಕಮ್ ಅವರ ಗುರು ಮತ್ತು ಗ್ರಂಥವೆಂದು ನಂಬುತ್ತಾರೆ. ವೀರಶೈವರು ಸ್ಥಾವರ ಲಿಂಗದ ಜೊತೆಯಲ್ಲಿ ಅನ್ಯ ದೇವತೆಗಳ ಪೂಜೆಯನ್ನೂ ಮಾಡುತ್ತಾರೆ. ಅವರಿಗೆ ಕನ್ನಡ ಭಾಷೆ ಗೊತ್ತಿಲ್ಲ. ಗುರುಬಸವಣ್ಣನವರ ವಚನಗಳನ್ನು ಅವರು ಅರಿಯರು. ಅವರಲ್ಲಿ ಕೆಲವರು ಸಸ್ಯಾಹಾರಿಗಳು ಮತ್ತೆ ಕೆಲವರು ಮಾಂಸಾಹಾರಿಗಳೂ ಉಂಟು. ಅವರು ತಮ್ಮನ್ನು ವೀರಶೈವರು ಎಂದೇ ಕರೆದುಕೊಳ್ಳುವರು. ಆದರೆ ಲಿಂಗಾಯತರು ಮಾತ್ರ ಎಂದೂ ತಾವು ವೀರಶೈವರು ಎಂದು ಹೇಳಿಕೊಳ್ಳುವುದಿಲ್ಲ. ಇವರು ಶುದ್ಧ ಸಸ್ಯಾಹಾರಿಗಳು.

ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ (21ನೇ)ದ ಪ್ರಚಾರಾರ್ಥವಾಗಿ ನಾನು ಆಂಧ್ರಪ್ರದೇಶ ಮತ್ತು ತಮಿಳು ನಾಡಿನ ಕೆಲವು ಪಟ್ಟಣ ಮತ್ತು ಗ್ರಾಮಗಳಿಗೆ ಹೋದಾಗ ಅಲ್ಲಿಯ ಸಮಾಜವನ್ನು ನೋಡಿ ನಮಗೆ ವೀರಶೈವ-ಲಿಂಗಾಯತ ಬೇರೆ ಬೇರೆ ಎಂಬುದಕ್ಕೆ ಸಾಕಷ್ಟು ಸಾಕ್ಷಾಧಾರಗಳು ದೊರಕಿದಂತಾಯಿತು.

ತಮಿಳುನಾಡಿನ ಕಡಲೂರು ಜಿಲ್ಲೆಯ ಪುನರುಟ್ಟಿ ಎಂಬ ಪಟ್ಟಣದಲ್ಲಿ ವಯೋವೃದ್ಧರು, ಜ್ಞಾನವೃದ್ಧರೂ ಆದ ಡಾ. ಚಂಗಳಪ್ಪ ಶರಣರಿದ್ದಾರೆ. ಶರಣ ಮೇಳ ಪ್ರಚಾರಕ್ಕೆ ಹೋದಾಗ

ನಾವು ಮತ್ತು ಕ್ರಿಯಾಮೂರ್ತಿಗಳಾದ ಶರಣ ಶ್ರೀ ಶ್ರೀಕಂಠಕುಮಾರ ಮತ್ತು ನಮ್ಮ ಸಿಬ್ಬಂದಿ ವರ್ಗದವರೆಲ್ಲ ಅವರ ಮನೆಯಲ್ಲಿಯೇ ವಸತಿ ಮಾಡಿದ್ದೆವು, 75 ವರ್ಷ ಇಳಿವಯಸ್ಸಿನಲ್ಲೂ ಸಹ ತಮ್ಮ ವೈದ್ಯಕೀಯ ವೃತ್ತಿಯನ್ನು ಅತ್ಯಂತ ನಿಷ್ಠೆಯಿಂದ ನಿರ್ವಹಿಸುತ್ತಿರುವ ಡಾ॥ ಚಂಗಳಪ್ಪನವರು ನಮ್ಮೊಂದಿಗೆ ಮಾತನಾಡುತ್ತ ಅಂದು ರಾತ್ರಿ 2 ಗಂಟೆಯವರೆಗೂ ಅನೇಕ ವಿಷಯಗಳ ಕುರಿತು ಚರ್ಚಿಸಿದರು. ಡಾ॥ ಚಂಗಳಪ್ಪನವರು ಅಂದರೆ ಇಡೀ ತಾಲ್ಲೂಕಿಗೆ ಹೆಸರಾದ ವೈದ್ಯರು. ಮಗ ಡಾಕ್ಟರಾಗಿದ್ದು, ಅವರೂ ಸೇವೆಯಲ್ಲಿದ್ದಾರೆ ಆದರೂ ಸಹಿತ ಚಂಗಳಪ್ಪನವರಿಗೆ ತಮ್ಮ ರೋಗಿಗಳನ್ನು ತಾವು ಸ್ವತಃ ನೋಡಿದಾಗ ಮಾತ್ರ ಸಮಾಧಾನ. ಚಿಕಿತ್ಸೆ ಪಡೆಯಲು ಬಂದ ಯಾರೊಬ್ಬರ ಹತ್ತಿರವೂ ಇವರು ಹಾಗೂ ಅವರ ಶುದ್ಧ ಕನ್ನಡ ಭಾಷೆ ನಮ್ಮನ್ನು ಬೆರಗುಗೊಳಿಸಿದವು. ಡಾ॥ ಚಂಗಳಪ್ಪನವರು ಮತ್ತು ಅವರ ದಾಯಾದಿಗಳಾದ ನಾಲ್ಕು ಮನೆಯವರಿಗೆ ಮಾತ್ರ ಕನ್ನಡ ಬರುತ್ತೆ. ಬೇರೆ ಯಾರಿಗೂ ಕನ್ನಡ ಅರ್ಥವೇ ಆಗೋದಿಲ್ಲ. ಅವರೆಲ್ಲ ದಾಖಲೆಗಳಲ್ಲಿ ವೀರಶೈವ ಅಂತಲೇ ಬರೆಸುತ್ತಾರೆ. ಅವರೆಲ್ಲ ಪೂಜಿಸುವುದು ಯೋಗಿ ಶಿವನ ಕುರುಹಾದ ಸ್ಥಾವರಲಿಂಗ ಮತ್ತು ಚರಲಿಂಗವನ್ನು ಕೆಲವರು ಸಾಲಿ ಗ್ರಾಮಗಳನ್ನು ಪೂಜಿಸುತ್ತಾರೆ. ಶಿವನೆ ಮುಖ್ಯ ದೈವ, 63 ಪುರಾತನರನ್ನು ಆರಾಧ್ಯರು ಎಂದು ನಂಬಿ ಆರಾಧಿಸುತ್ತಾರೆ.

ಅವರ್‍ಯಾರೂ ಇಷ್ಟಲಿಂಗ ಧಾರಕರಲ್ಲ ಮತ್ತು ಧರ್ಮಗುರು ಬಸವಣ್ಣನವರ ಬಗ್ಗೆಯಾಗಲಿ, ವಚನ ಸಾಹಿತ್ಯವಾಗಲಿ ಯಾವುದೂ ಅವರಿಗೆ ಗೊತ್ತಿಲ್ಲ. ಅವರಲ್ಲಿ ಕೆಲವರು ಮಾಂಸಾಹಾರಿಗಳೂ ಇರುವದರಿಂದ ಲಿಂಗಾಯತರಿಗೂ ವೀರಶೈವರಿಗೂ ಸಂಬಂಧ ಆಗುವುದಿಲ್ಲ. ಉಣ್ಣುವ-ಉಡುವ, ಕೊಡುವ ಕೊಂಬುವ ಸಂಬಂಧವೂ ನಡೆಯುವುದಿಲ್ಲ. ತಾವೆಲ್ಲ 12ನೇ ಶತಮಾನದಲ್ಲಿ ಕಲ್ಯಾಣದಲ್ಲಿ ಕ್ರಾಂತಿಯಾದಾಗ ಕಲ್ಯಾಣದಿಂದ ಬಂದು ಇಲ್ಲಿ ನೆಲೆಸ್ಸಿದವರು ಎಂಬುದನ್ನು ತಮ್ಮ ಪೂರ್ವಜರು ಹೇಳುತ್ತಿದ್ದರು ಎಂದು ಸವಿವರವಾಗಿ ಡಾ॥ ಚಂಗಳಪ್ಪನವರು ಮತ್ತು ಕುಟುಂಬದವರು ನಮಗೆ ತಿಳಿಸಿದರು. ಅದನ್ನೆಲ್ಲ ಕೇಳಿ ನನಗೆ ತುಂಭ ಸಂತೋಷವಾಯಿತು.ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ಯವರು ಸುಮಾರು 20 ವರ್ಷಗಳಿಂದ ಲಿಂಗಾಯತರು ವೀರಶೈವರಲ್ಲ ಎಂದು ಹೇಳುತ್ತಾ ಪ್ರಚಾರ ಮಾಡುತ್ತಿದ್ದಾರೆ. ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ನಾವೂ ಒಪ್ಪಿಕೊಂಡು ಅವನ್ನು ಪ್ರಚಾರ ಮಾಡುತ್ತಲೇ ಇದ್ದೇವೆ. ಆದರೆ ತಮಿಳುನಾಡಿಗೆ ಬಂದಾಗ ನಮಗೆ ಪ್ರತ್ಯಕ್ಷವಾಗಿ ಅನುಭವವಾಯಿತು. ಲಿಂಗಾಯತ ಒಂದು ಸ್ವತಂತ್ರ ಧರ್ಮ. ಲಿಂಗಾಯತರು ವೀರಶೈವರಲ್ಲ. ಲಿಂಗಾಯತರು ಹಿಂದುಗಳಲ್ಲ ಎಂಬ ಐತಿಹಾಸಿಕ ಸತ್ಯವನ್ನು ಮೊಟ್ಟ ಮೊದಲಿಗೆ ಧೈರ್ಯವಾಗಿ ಪ್ರತಿಪಾದನೆ ಮಾಡಿದವರು ಪೂಜ್ಯ ಮಾತಾಜಿಯವರು. ಹತ್ತಾರು ವರ್ಷಗಳ ನಂತರ ಈಗ ಕೆಲವು ವಿರಕ್ತ ಮಠಾಧೀಶರು 'ಲಿಂಗಾಯತರು ವೀರಶೈವರಲ್ಲ ಎಂದು ನಿಧಾನವಾಗಿ ಹೇಳಲು ಆರಂಭಿಸಿದ್ದಾರೆ. ಮೊದಲಿಗೆ ಇವರು ಕೂಡ ಪೂಜ್ಯ ಮಾತಾಜಿಯವರ ಅಭಿಪ್ರಾಯವನ್ನು ವಿರೋಧಿಸಿಡವರೆ ಆಗಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೆ. ಈಗಲಾದರೂ ಜಾಗೃತರಾಗಿದ್ದಾರಲ್ಲ ಎಂದು ಸಮಾಧಾನ ಪಟ್ಟುಕೊಳ್ಳೋಣ. ಲಿಂಗಾಯತ ಒಂದು ಸ್ವತಂತ್ರ ಧರ್ಮ, ಗುರು ಬಸವಣ್ಣನವರು ಈ ಧರ್ಮದ ಸಂಸ್ಥಾಪಕರು ಹಾಗೂ ಲಿಂಗಾಯತರು ವೀರಶೈವರಲ್ಲ, ಹಿಂದುಗಳೂ ಅಲ್ಲ ಎಂಬ ವಿಷಯವನ್ನು ಬೇಗ ತಿಳಿದುಕೊಂಡಷ್ಟು ಲಿಂಗಾಯತ ಧರ್ಮ ಮತ್ತು ಸಮಾಜಕ್ಕೆ ಒಳಿತು.

ವಿಶ್ವಗುರು ಬಸವಣ್ಣನವರ ವಚನಾಂಕಿತ

"ಕೂಡಲಸಂಗಮ ದೇವ"- ಆಳ ಮತ್ತು ಹರವು

– ಕೆ. ಬಸವರಾಜ, ಬೆಳಗಾವಿ

ವಿಶ್ವದ ಅತ್ಯಮೂಲ್ಯ ಅನುಭಾವ ಸಾಹಿತ್ಯವೆಂದರೆ – 12ನೆ ಶತಮಾನದ ಕಲ್ಯಾಣದ ಶರಣರು ರಚಿಸಿದ "ವಚನ ಶಾಸ್ತ್ರ"ದ ಸಾಹಿತ್ಯ. ವಿಶ್ವದಲ್ಲಿ ಇಷ್ಟು ಬೃಹದಾಕಾರದಲ್ಲಿ ಲಭ್ಯವಿರುವ ಅನುಭಾವ ಸಾಹಿತ್ಯದ ತವರು ಭಾರತ, ಅದರಲ್ಲೂ ನಮ್ಮ ಹೆಮ್ಮೆಯ ನಾಡು, ಕಲ್ಯಾಣ ಕರ್ನಾಟಕವೆಂದರೆ ಅತಿಶಯೋಕ್ತಿಯಲ್ಲ. ಈ ಅನುಭಾವ ಸಾಹಿತ್ಯ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಫ್ರೆಂಚ್ ಭಾಷೆಯಲ್ಲಿ ಲಭ್ಯವಿದೆ ಎಂದು ತಿಳಿದು ಬರುತ್ತದೆ.

ಗಮನಿಸಬೇಕಾದ ವಿಷಯವೆಂದರೆ, ಈ ವಚನ ಸಾಹಿತ್ಯದ ರಚನಕಾರರು, ಸಮಾಜದ ವಿವಿಧ ವೃತ್ತಿ/ಕಾಯಕ ಮೂಲಗಳಿಂದ ಅದೂ ಹೆಚ್ಚಾಗಿ ಕೆಳವರ್ಗದಿಂದ ಬಂದ ಸಾಮಾನ್ಯರು. ನಿರಕ್ಷರ ಕುಕ್ಷಿಗಳಿದ್ದರೂ, ಅಕ್ಷರ ಅಭ್ಯಾಸವನ್ನು ಮಾಡಿ ತಮ್ಮ ಅನುಭಾವವನ್ನು "ವಚನ"ವೆಂಬ ರಚನೆಯ ಮೂಲಕ, ಹೊಸ ಸಾಹಿತ್ಯ ಪ್ರಾಕಾರಕ್ಕೆ ನಾಂದಿ ಹಾಡಿದವರು. "ನಾ ಒಲಿದಂತೆ ಹಾಡುವೆನಯ್ಯಾ" ಎಂದು ಯಾವುದೇ ಒತ್ತಡವಿಲ್ಲದೆ, ಹೃದಯದ ಭಾಷೆಯಾಗಿ ಗೀತೆಯಾಗಿ ತಮ್ಮ ಅನುಭಾವವನ್ನು ಹೊರಚೆಲ್ಲಿ, ಆಚರಿಸಿ ಆನಂದಿಸಿ ಅನುಭಾವದ ರಸ ಋಷಿಗಳಾದವರು! ಅವರೇನೂ ಆಚಾರ್ಯ ಪುರುಷರಲ್ಲದಿದ್ದರೂ, ಅವರು ತಮ್ಮ ಹೃದಯ ಮೀಟಿದಂತೆ, ಅನುಭಾವದ ಗಂಗೆ ಪ್ರವಹಿಸಿದಂತೆ, ಹೃದಯ ಸಿಂಹಾಸನಾಧೀಶ್ವರ ಆ ನಿರಾಕಾರ ಏಕೈಕ ಪರಮಾತ್ಮನ ಸಾಕ್ಷಿಯಾಗಿ ಬರೆದವರು. ತಮ್ಮ ಅನುಭಾವದ ಮೂಸೆಯಲ್ಲಿ ರಚಿಸಿದ ಸಾಹಿತ್ಯದ ಮೇಲೆ ಅನೇಕ ಇತರ ಜನರು ಸಾಹಿತಿಗಳು, ಸಂಶೋಧಕರು ಭಾಷ್ಯ ಬರೆದು, ಪಿಹೆಚ್. ಡಿ. ಪಡೆದು ಆಚಾರ್ಯರಾಗಿರುವುದನ್ನು ಈಗೀಗ ಕಾಣುತ್ತಿದ್ದೇವೆ. ಈ ಅನುಭಾವ ಸಾಹಿತ್ಯವಾದ ವಚನ ಸಾಹಿತ್ಯದ ನಿರ್ಮಾಪಕರಾದ ಆದಿ ಶರಣರು – ಸಾಹಿತಿಗಳ, ಸಂಶೋಧಕರ, ಆಚಾರ್ಯರ ಮತ್ತು ಇಂದಿನ ಜಾತಿ ಜಾತಿ ವ್ಯವಸ್ಥೆಯಲ್ಲೂ – ನವ ಶರಣರ ನಿರ್ಮಾಪಕರಾಗಿರುವುದು ನಮ್ಮ ಗಮನ ಸೆಳೆಯುವ ವಿಷಯ. ಇತ್ತೀಚಿನ ವರ್ಷಗಳಲ್ಲಿ, ವಚನ ಸಾಹಿತ್ಯದ ಮೇಲೆ ಚಿಂತನೆ ನಡೆದಷ್ಟು ಇನ್ನಾವ ವಿಷಯದ ಬಗ್ಗೆಯೂ ಅಲ್ಲ ಅನ್ನುವುದೂ ಅಷ್ಟೇ ಸತ್ಯ.

ಅನೇಕ ಧರ್ಮಗಳು ತಮ್ಮ ತಮ್ಮ ಗ್ರಂಥಗಳನ್ನು –" ಧರ್ಮ ಗ್ರಂಥ"ವೆಂದು ಗುರುತಿಸಿಕೊಂಡು, ಪ್ರಕಟಿಸಿ, ಆಚರಣೆಯಲ್ಲಿ ತಂದಿರುವುದನ್ನು ಕಾಣುತ್ತೇವೆ. ಇನ್ನೊಂದು ವಿಷಯವೆಂದರೆ ಬೌದ್ಧರ ಕ್ರೈಸ್ತರ ಮಹಮ್ಮದೀಯರ ಧರ್ಮಗ್ರಂಥಗಳಾದ ತ್ರಿಪೀಠಿಕೆಗಳು, ಬೈಬಲ್, ಕುರಾನ್ ಕ್ರಮವಾಗಿ ಅವರ ಪ್ರವಾದಿ ಪುರುಷರು ಗತಿಸಿ ಹೋದಮೇಲೆ ಅನೇಕ ವರ್ಷಗಳ ನಂತರ ರಚನೆ ಆಗಿರುವುದನ್ನು ಕಾಣುತ್ತೇವೆ. ಆದರೆ ಇದಕ್ಕೆ ಭಿನ್ನವಾಗಿ ಲಿಂಗಾಯತ ಧರ್ಮ ಸಂಸ್ಥಾಪಕ– ಪ್ರವಾದಿ ಪುರುಷರಾದ ವಿಶ್ವಗುರು ಬಸವಣ್ಣನವರು ತಮ್ಮ ಅಮೃತ ಹಸ್ತದಿಂದಲೆ ವಚನಗಳನ್ನು ರಚಿಸಿ, ಆಚರಿಸಿ ನಮಗೆಲ್ಲರಿಗೂ "ಆದೇಶ"ಗಳನ್ನಾಗಿಸಿದ್ದಾರೆ, ಆದರ್ಶಪ್ರಾಯ ಪ್ರವಾದಿಯಾಗಿದ್ದಾರೆ.

ಮಹಾ ಮಾನವತಾವಾದಿ ಶ್ರೀಗುರು ಬಸವಣ್ಣನವರು ಒಬ್ಬ ಅತ್ಯುತ್ತಮ ಸಮಾಜ ಸೇವಕರು ಮತ್ತು ಸಮಾಜ ಸುಧಾರಕರೂ ಹೌದು. ನವಧರ್ಮ ದ್ರಷ್ಟಾರರಲ್ಲದೆ ಅವರು ನವ ಸಮಾಜ ನಿರ್ಮಾಪಕರೂ ಆಗಿರುವರು. ವ್ಯಕ್ತಿ ಮತ್ತು ಸಮಾಜದ ಅಭಿವೃದ್ಧಿಗಾಗಿ

ಸಮತೋಲನದ ವೈಜ್ಞಾನಿಕ ವೈಚಾರಿಕ ಚಿಂತನೆಗೆ ಹೆಸರುವಾಸಿಯಾದವರು. ಅವರ ದೃಷ್ಟಿಕೋನವೆ ಹೊಸ ಆಯಾಮ ಪಡೆಯಿತು. "ಎಡದ ಕೈಯಲಿ ಲಿಂಗ ಪೂಜೆ, ಬಲದ ಕೈಯಲ್ಲಿ ಜಂಗಮ ಸೇವೆ" ಎನ್ನುವ ಅವರ ಆದೇಶ ಅವಿಸ್ಮರಣೀಯ. "ಕನ್ನಡಿಯ ನೋಡುವ ಅಣ್ಣಗಳಿರಾ ಜಂಗಮವ(ಸಮಾಜ) ನೋಡಿರೆ" ಎಂದು ಸಮಾಜ ಸೇವೆಗೆ ಹುರಿದುಂಬಿಸಿದವರು.

ವಚನಗಳನ್ನು ಓದಿದ್ದೇವೆ, ಅದರ ಬಗ್ಗೆ ತಿಳಿದುಕೊಂಡಿದ್ದೇವೆ ಎನ್ನುವವರ ಸಂಖ್ಯೆ ಈಗೀಗ ಬಹಳ. ಪುಸ್ತಕ ಮಾರುವ ಹವ್ಯಾಸಿ ಮಾರಾಟಗಾರರು, ಸುಲಭ ಬೆಲೆಗೆ ಮುದ್ರಿಸುವ ಕಿರು ಅಥವಾ ಟೀಕಾರ್ಥ ಸಹಿತ ದಪ್ಪನೆಯ ಪುಸ್ತಕಗಳನ್ನು ಅಕ್ಷರಾಭ್ಯಾಸಿ ಬರವಣಿಗೆ ಬಲ್ಲಂಥಾ ಲೇಖಕರಿಂದ ಬರೆಸಿ, ಪ್ರೂಫನ್ನು ನೋಡದಲೆ ಮುದ್ರಿಸಿರುವುದನ್ನೂ ಕಾಣುತ್ತೇವೆ. ಅನೇಕರು ಅಲ್ಲಿ ಇಲ್ಲಿ ಇಂಥಹಾ ಪುಸ್ತಕಗಳನ್ನು ಓದಿದವರೆ ಹೆಚ್ಚು! ಓದುಗರು ತಮ್ಮ ಅನುಭಾವದ ಒರೆಗೆ ಹಚ್ಚದೆ ಅಲ್ಲಿರುವ ವಿಷಯಗಳನ್ನೆ ಸ್ವೀಕರಿಸಿರುವವರೆ ಬಹಳ. ಹೀಗಾಗಿ ವಚನ ಶಾಸ್ತ್ರ ಅಭ್ಯಾಸ, ಅನುಭಾವದ ನೆಲೆಯಲ್ಲಿ ಆಗದೆ, ತಪ್ಪು ಒಪ್ಪುಗಳ ಸಹಿತ ಅರ್ಥೈಸುವುದು ಸಹಜವಾದ ಕ್ರಿಯೆ ಎನ್ನಿಸುತ್ತೆ. ಇಂಥವರು 'ಇನ್ನೊಬ್ಬರ ವಿವರಣೆ ಬೇಕಿಲ್ಲಾ' ಎನ್ನುವ ಭಾವ ತಳೆಯುವುದೂ ಒಂದು ವಿದ್ಯಮಾನವಾಗಿ ವಿಪರ್ಯಾಸವಾಗಿದೆ.

ಪ್ರವಾದಿ ಪುರುಷ ವಿಶ್ವಗುರು ಬಸವಣ್ಣನವರು ರಚಿಸಿದ ವಚನಗಳೆಷ್ಟು? ಎನ್ನುವುದು ಒಂದು ಪ್ರಶ್ನೆಯೆ. ಅವರ ಜೀವನದ ಸಿಂಹಾವಲೋಕನದ ಒಂದು ವಚನ :

1ಅ)" ಅಯ್ಯಾ, ಹಿಂದೆಯಾನು ಮಾಡಿದ ಮರಹಿಂದ ಬಂದೆನೀ ಭವದಲ್ಲಿ
ನಿಮ್ಮ ಲೀಲೆ ನಿಮ್ಮ ವಿನೋದ ಸೂತ್ರದಿಂದ
ಲಕ್ಷದ ಮೇಲೆ ತೊಂಬತ್ತಾರು ಸಾವಿರ *ಗೀತಂಗಳ* ಆಡಿ ಹಾಡಿ,
ಆ ದಾಸೋಹವೆಂಬ ಮಹಾ ಗಣ ಸಂಕುಳದೊಳೆನ್ನನಿರಿಸಿ
ನಿಮ್ಮ ಭಕ್ತಿಯ ಘನವ ನೀವೇ ಮೆರೆಯಲೆಂದು
ಪರವಾದಿ ಬಿಜ್ಜಳನ ತಂದೊಡ್ಡಿ, ಎನ್ನನು ಅವನೊಡನೆ ಹೋರಿ,
ಮುನ್ನೂರ ಅರವತ್ತು ಸತ್ತ ಪ್ರಾಣವನೆತ್ತಿಸಿ,
ಮೂವತ್ತಾರು ಕೊಂಡೆಯವ ಗೆಲಿಸಿ,
ಎಂಬತ್ತೆಂಟು ಪವಾಡಂಗಳ ಕೊಂಡಾಡಿ,
ಮರ್ತ್ಯಲೋಕದ ಮಹಾಗಣಂಗಳ ಒಕ್ಕುದನಿಕ್ಕಿ ಎನ್ನ ಸಲಹಿದಿರಿ.
ನಿಮ್ಮ ಮಹಾಗಣಂಗಳು ಮೆಚ್ಚಿ, ಎನ್ನ ಸೂತಕವ ತೊಡೆದ
ಪ್ರಭುದೇವರ ಕರುಣದಿಂದ ಪ್ರಾಣ ಲಿಂಗ ಸಂಬಂಧ ಸಯವಾಯಿತ್ತು.
ನೀವು ಕಳುಹಿದ ಬೆಸನು ಸಂದಿತ್ತು,
ಉಘೇ, ಇನ್ನು ಕೂಡಿಕೋಳ್ಳಾ ಕೂಡಲಸಂಗಮ ದೇವಾ.
(1010 ನೆ ವ. –ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

1ಆ) ಲಕ್ಷದ ಮೇಲೆ ತೊಂಬತ್ತಾರು ಸಾವಿರ ವಚನ
ನಿತ್ಯ ಭಂಡಾರಕ್ಕೆ ಸಂದಿತ್ತಯ್ಯಾ
ಬೆಟ್ಟಕ್ಕೆ ಬಳ್ಳು ಬಗುಳಿದಂತಾಯಿತ್ತಯ್ಯಾ
ಕರೆದು ಕೊಳ್ಳಯ್ಯಾ, ಕರೆದು ಕೊಳ್ಳಯ್ಯಾ
ಓ ಎನ್ನಯ್ಯಾ, ಓ ಎನ್ನಯ್ಯಾ,
ಕೂಡಲಸಂಗಮ ದೇವಾ. (1340 ನೆ ವ. –ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

ಇದರಿಂದ ತಿಳಿದು ಬರುವುದೇನೆಂದರೆ, ಧರ್ಮಪಿತರು ಬರೆದದ್ದು ಸುಮಾರು

1,96,000 ವಚನಗಳೆಂದು. ಆದರೆ ಈಗ ನಮಗೆ ಲಭ್ಯವಿರುವ ವಚನಗಳೆಂದರೆ ಅಂದಾಜು 1400 ಮಾತ್ರ, ಉಳಿದಂತೆ, ಅವರ ಸುಮಾರು 1,94,600 ವಚನಗಳು ಇನ್ನೂ ಲಭ್ಯವಾಗಬೇಕಿದೆ. ದೊರಕಿರುವ ಸುಮಾರು 1400 ವಚನಗಳಿಂದಲೆ ಇನ್ನಿತರ ವಿಷಯಗಳನ್ನು ನಾವು ಪರಾಮರ್ಶಿಸಿ ನಿರ್ದಿಷ್ಟ ನಿಲುವಿಗೆ ಬದ್ಧರಾಗಬೇಕಾದ ಅನಿವಾರ್ಯತೆ ನಮ್ಮದು.

ಇಂತಹ, ಸಂದಿಗ್ಧ ಪರಿಸ್ಥಿತಿಯಲ್ಲೂ ಅಂದಿನ ವಿಶ್ವಗುರು ಬಸವಣ್ಣನವರ ಮೇರು ವ್ಯಕ್ತಿತ್ವವನ್ನು ಇನ್ನೂ ಸ್ಫುಟವಾಗಿ ಅರ್ಥೈಸುವ ಆವಶ್ಯಕತೆ ನಮ್ಮದಾಗಿದೆ. ಇದು ಅನಿವಾರ್ಯ ಪ್ರಸಂಗವೂ ಅಹುದು. ಧರ್ಮ ಸಂಸ್ಥಾಪಕರ ವಚನಗಳನ್ನು ಗಮನಿಸಿದಾಗ, ಅವರ ಮಾನಸಾಂತರದ ಆಳ ಅರಿವಾಗದಿರದು.

ಪ್ರಾರಂಭದಲ್ಲಿ ಗೌರಿ ಪೂಜೆಯ ಪ್ರಸ್ತಾಪವಿದೆ. ಕೆಳಗಿನ ವಚನವನ್ನು ಗಮನಿಸಿ :

2) "ಬಿಳಿಯ ಕರಿಕೆ, ಕಣಗಿಲೆಲೆಯ, ತೊರೆಯ ತಡಿಯ ಮಳಲ ತಂದು,
*ಗೌರಿಯ ನೋನುವ ಬನ್ನಿರೆ,
ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು
ಅನುಪಮ ದಾನಿ ಕೂಡಲಸಂಗಮದೇವ ಗಂಡನಾಗಬೇಕೆಂದು."..........
(82ನೆ ವ. –ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

*ಇದು ಬಹು ದೇವತಾ ಆರಾಧನೆ ಅಲ್ಲವೆ ?

ಇನ್ನು ಕೆಲವು ವಚನಗಳಲ್ಲಿ ಹೀಗೆ ರಚನೆಯಿದೆ :

3)"ಕೇಶವನಲ್ಲದೆ ಅಂತಃ ಪರದೈವವಿಲ್ಲೆಂದು
ವೇದವ್ಯಾಸ ಮುನಿ ಭಂಗವಾದುದನರಿಯಿರೆ ?
'ಅಹಂ ಸರ್ವಜಗತ್ ಕರ್ತಾ ಮಮ ಕರ್ತಾ ಮಹೇಶ್ವರಃ !'
ಎಂದು ವಿಷ್ಣು ಹೇಳಿದ ವಚನವ ಮರೆದಿರಲ್ಲಾ !
ಕೂಡಲಸಂಗಮದೇವನು
*1 ದಕ್ಷಯಜ್ಞವ ಕೆಡಿಸಿದುದ ಮರೆದಿರಲ್ಲಾ !" ....
(548ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

4)"ನಾರಾಯಣನೆಂಬವನ ಕಾಣೆ, ಗೀರಾಯಣನೆಂಬವನ ಕಾಣೆ.
ಬೊಮ್ಮನೆಂಬವನ ಕಾಣೆ, ಗಿಮ್ಮನೆಂಬವನ ಕಾಣೆ.
ವಿಷವಟ್ಟಿ ಸುಡುವಲ್ಲಿ, ವೀರಭದ್ರ ಬಡಿವಲ್ಲಿ
*2 ಕೂಡಲ ಸಂಗಯ್ಯಂಗೆ ಶರಣೆಂದು ಮೊರೆಯಿಟ್ಟರೆಲ್ಲರು. ....
(549ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

*1, *2 ಈ ಎರಡು ವಚನಗಳಲ್ಲಿ 'ವೀರಭದ್ರ'ನ ಅವತಾರದಿಂದ ಶಿವನು ದಕ್ಷಯಜ್ಞವ ನಾಶಮಾಡಿದುದನು. ಅರ್ಥೈಸಬಹುದು. ಇಲ್ಲಿ ಐತಿಹಾಸಿಕ ದೇವತಾ ಶಿವನ ಪ್ರಾಮುಖ್ಯತೆಯನ್ನು ಕಾಣುತ್ತಿದ್ದೇವೆ.

ನಂತರ, ಧರ್ಮಗುರು ಬಸವಣ್ಣನವರು ಬರೆದ ವಚನವನ್ನು ಪರಿಶೀಲಿಸೋಣ – ಅತೀ ಪ್ರಖ್ಯಾತಿಯಾದ

5)"ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,
ಪಾತಾಳದಿಂದ ಅತ್ತತ್ತ ನಿಮ್ಮ ಶ್ರೀ ಚರಣ,
ಬ್ರಹ್ಮಾಂಡದಿಂದ ಅತ್ತತ್ತ ನಿಮ್ಮ ಶ್ರೀ ಮುಕುಟ,
*3 ಅಗಮ್ಯ, ಅಗೋಚರ ಅಪ್ರತಿಮ ಲಿಂಗವೆ,

ಕೂಡಲಸಂಗಮದೇವಯ್ಯಾ,
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ. (744ನೆ ವ.ಬ.ವ.ಸಂ. ಸರ್ಕಾರಿ ಪ್ರಕಟಣೆ 1993)
*3 ಇಲ್ಲಿ ನಿರಾಕಾರ ವಿಶ್ವಾತ್ಮನ ಪರಿಚಯವಿದೆ

ನಿರಾಕಾರ ಪರಮಾತ್ಮನ ಮತ್ತು ಏಕೇಶ್ವರ ವಾದವನ್ನು ವಚನಾಂಕಿತ "ಕೂಡಲಸಂಗಮ ದೇವ" ಪ್ರತಿನಿಧಿಸುತ್ತದೆ ಎಂದು ಹೇಳುವ ಅಭ್ಯಾಸಿಗಳು/ ಜ್ಞಾನಿಗಳು- ಕೆಳಗಿನ ಕೆಲವು ವಚನಗಳು ಅದೇ ಭಾವಕ್ಕೆ (ಏಕ ದೇವೋಪಾಸನೆಗೆ) ಸರಿ ಹೊಂದುತ್ತದೆಯೆ ಎಂದು ವಿಶ್ಲೇಷಿಸಲು ಮನವಿ ಮಾಡ ಬಯಸುತ್ತೇನೆ.

6) ನರ ಕೂರಂಬಿನಲೆಚ್ಚ, ಅವಂಗೊಲಿದೆಯಯ್ಯಾ ,
ಅರಳಂಬಿನಲೆಚ್ಚ ಕಾಮನನುರುಹಿದೆ.
*4 ಇರುಳು ಹಗಲೆನ್ನದೆ ಪ್ರಾಣಘಾತವ ಮಾಡಿದ
ಬೇಡನ ಕೈಲಾಸಕ್ಕೊಯ್ದೆಯಯ್ಯಾ.
ಎನ್ನನೇತಕೊಲ್ಲೆ, ಕೂಡಲಸಂಗಮದೇವಾ? (65ನೆ ವ.ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

7) ಭವಬಂಧನ ದುರಿತಂಗಳ ಗೆಲುವಡೆ
ಓಂ ನಮಃ ಶಿವಶರಣೆಂದಡೆ ಸಾಲದೆ ?
ಹರ ಹರ ಶಂಕರ, ಶಿವ ಶಿವ ಶಂಕರ,
*5 ಜಯ ಜಯ ಶಂಕರ ಶರಣೆನ್ನುತ್ತಿದ್ದೇನೆ.
ಎನ್ನ ಪಾತಕ ಪರಿಹಾರ,
ಕೂಡಲಸಂಗಮದೇವಾ ಶರಣೆನುತ್ತಿದ್ದೇನೆ. (79ನೆ ವ.ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

(*4)- ವಚನ 6ರಲ್ಲಿ ನಿರಾಕಾರ 'ಕೂಡಲ ಸಂಗಮ ದೇವ' ವಚನಾಂಕಿತ, ಏಕದೇವನಿಗೆ ಅನ್ವಯವಾಗುವುದಾದರೆ,
ಭಕ್ತ ಕಣ್ಣಪ್ಪನ ಮೂಢ ಭಕ್ತಿಯನ್ನು ಎತ್ತಿ ಹಿಡಿದಂತಲ್ಲವೆ ?,
(*5) - ವಚನ 7ರಲ್ಲಿ ದೇವತಾ ಶಿವ-ಶಂಕರನ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದಿದ್ದಾರೆ.
ವಚನ 2ರಲ್ಲಿ ಗೌರಿ ಪೂಜೆಯನ್ನು ಏಕೇಶ್ವರವಾದಿಗಳು ಮಾಡಬಹುದು ಎಂದರ್ಥವಲ್ಲವೆ ?
(*1, *2) - ವಚನ 3 & 4 ರಲ್ಲಿ ನಿರಾಕಾರ ದೇವನಿಗೆ ವೀರಭದ್ರ ಮಗನಾಗಿ ಜನಿಸಿ, ದಕ್ಷ ಯಜ್ಞವ ಕೆಡಿಸಿದುದನ್ನು
ಏಕದೇವೋಪಾಸಕರು ನಂಬ ಬೇಕೆ? ನೀವೆ ಹೇಳಿ !

ಹೀಗಾಗಿ, ನಮಗೆ 'ಕೂಡಲಸಂಗಮ ದೇವ' ವಚನಾಂಕಿತದ ಆಳ ಮತ್ತು ವಿಸ್ತಾರದ ಬಗ್ಗೆ, ಈಗ ಚಿಂತಿಸ ಬೇಕಾದ ಅನಿವಾರ್ಯತೆ ಬಂದಿದೆ.

ಇದಕ್ಕೆ, ವಿಶ್ವಗುರು ಬಸವಣ್ಣನವರ ಜೀವನ ಚರಿತ್ರೆಯನ್ನು ವಿಶ್ಲೇಷಣಾತ್ಮಕವಾಗಿ ವಿವೇಚಿಸಿದಾಗ ಈ ತೊಡಕು ನಿವಾರಣೆಗೆ ಚಿಂತಿಸಬಹುದು. ಧರ್ಮ ಸಂಸ್ಥಾಪಕ ಗುರು ಬಸವಣ್ಣನವರು, ಬಾಲ್ಯದಲ್ಲಿ ತಮ್ಮ ಮನೆತನದ ವಾಡಿಕೆಯಂತೆ ಬಹುದೇವತಾ ಉಪಾಸಕ ರಾಗಿದ್ದರು (*2ನೆ ವಚನ, - ಸಂಪುಟದ 82ನೆ ವಚನ). ಸಮಾಜದಲ್ಲಿ ಕಾಣುವ ಏರುಪೇರು, ಅಸಮಾನತೆಗೆ ನೊಂದು ತಮ್ಮ ಎಂಟನೆ ವಯಸ್ಸಿಗೆ, ಜನಿವಾರವನ್ನು ತಿರಸ್ಕರಿಸಿ, 'ಕೂಡಲಸಂಗಮ'ಕ್ಕೆ ಬಂದು, ಐತಿಹಾಸಿಕ ಶಿವನ ಕುರಹಾದ 'ಸ್ಥಾವರ ಲಿಂಗ'- ಕೂಡಲ ಸಂಗಮನ ಅರ್ಚಕ ರಾಗಿ/ ಪೂಜಾರಿಯಾಗಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಇದುವರೆಗೆ, ಮನೆಯ ಸಂಪ್ರದಾಯದಂತೆ ಬಹುದೇವತಾ ಆರಾಧಕರಾಗಿದ್ದ ಬಸವರಸರು, ತ್ರಿಮೂರ್ತಿಗಳಲ್ಲಿ ಒಬ್ಬನಾದ 'ಶಿವನ ಪಾಮುಖ್ಯತೆಗೆ' ಪರಿವರ್ತನೆ ಹೊಂದಿ 'ಶಿವನಲ್ಲದೆ ಅನ್ಯ ದೈವವಿಲ್ಲೆಂಬ' ಭಾವ

ತಳೆದರು (*5 - ಸಂಪುಟದ 79ನೆ ವಚನ). ನಂತರ ತಾವು ಕಲಿತ ಓದು, ವಿದ್ಯಾಭ್ಯಾಸವನ್ನು ಒರೆಗೆ ಹಚ್ಚಿ, ಚಿಂತನೆಗೈದು ತಮ್ಮ 21 ನೇ ವಯಸ್ಸಿನಲ್ಲಿ (ಸಿಂಗಿರಾಜನ ಕಾವ್ಯ) ಆ ಪರಮಾತ್ಮನ ಕಾರುಣ್ಯದಿಂದ ಅನುಗ್ರಹಿತರಾಗಿ, "ನಿರಾಕಾರ ದೇವ- ಜ್ಞಾನೋದಯ" ಹೊಂದಿದರು. ಹುಟ್ಟು ಸಾವಿಲ್ಲದ ಆ ನಿರಾಕಾರ ದೇವನಿಗೆ ಮನುಷ್ಯರ, ಪಶು ಪಕ್ಷಿ ಪ್ರಾಣಿಗಳ ಆಕಾರ ಕಲ್ಪಿಸಿದರೆ - ಅವು ತೀರಿದಾಗ ಆ ದೇವನು ಇಲ್ಲದಂತಾಗುವುದು ಸರಿ ಯಲ್ಲ ಎಂಬ ಭಾವ ತಳೆದರು. ಸೃಷ್ಟಿಗೊಡೆಯನ ಪೂಜಿಸಲು, ಧ್ಯಾನಿಸಲು, ದೃಷ್ಟಿಯಾರೆ (ತ್ರಾಟಕ ಯೋಗಕ್ಕೆ) ಆ ದೇವನನ್ನು ನೋಡಿ ಆತ್ಮಾನಂದಹೊಂದಲು "ಇಷ್ಟಲಿಂಗ"ವೆಂಬ 'ದೇವ-ಕುರುಹ'ನ್ನು ಆಧ್ಯಾತ್ಮಿಕ ದಿಗಂತದಲ್ಲಿ ಪ್ರಪ್ರಥಮವಾಗಿ ರೂಪಿಸಿದರು. ಆ ದೇವನ ಹೆಸರಿನಲ್ಲಿ "ಲಿಂಗಾಯತ ಧರ್ಮ" ಎನ್ನುವ ಹೊಸ ಜೀವನ ವಿಧಾನ - ನೂತನ ಧರ್ಮ ಜನ್ಮತಾಳಿತು. ಆ ನಿರಾಕಾರ ದೇವ ನನ್ನು "ಲಿಂಗ, ಲಿಂಗಯ್ಯಾ, ಲಿಂಗ- ತಂದೆ, ಲಿಂಗಮೂರ್ತಿ, ಲಿಂಗದೇವಾ" ಎಂದು ಆತ್ಮೀಯವಾಗಿ ಕರೆದು ಸಂತೋಷಿಸಿದರು.

ಒಂದು ವೇಳೆ, ನಿರಾಕಾರ 'ಕೂಡಲಸಂಗಮದೇವ' ವಚನಾಂಕಿತವನ್ನು ಮಹಾಗುರು ಬಸವಣ್ಣನವರ ಜ್ಞಾನೋದಯ ನಂತರದ ವಚನಗಳಿಗೆ ಅಳವಡಿಸುವುದಾದರೆ, ಜ್ಞಾನೋದಯ ಪೂರ್ವದ ವಚನಗಳಿಗೆ ಇನ್ನಾವ ಹೆಸರನ್ನು ವಚನಾಂಕಿತವಾಗಿ ಅಳವಡಿಸಬೇಕು, ಅದೂ ಅವರ ವಚನಗಳಲ್ಲಿಯೇ ಲಭ್ಯವಿರುವ ಹೆಸರುಗಳನ್ನು ಮಾತ್ರ ಪರಿಗಣಿಸಿದಾಗ, ಶರಣರು ಪ್ರತಿಪಾದಿಸಿದ "ಲಿಂಗ, ಲಿಂಗಯ್ಯಾ, ಲಿಂಗತಂದೆ, ಲಿಂಗಮೂರ್ತಿ, ಲಿಂಗದೇವಾ" ಎಂದು ಉನ್ನತಮಟ್ಟದ ಚಿಂತನೆಯಿಂದಾಗಿ ಕರೆದಿರುವುದನ್ನು ಮರೆಯಲಾಗದು ಅಲ್ಲವೆ? ಇನ್ನೊಂದು ರೀತಿಯಿಂದ, ಬಸವಗುರುವಿನ ಜ್ಞಾನೋದಯ ಪೂರ್ವದ ವಚನಗಳಿಗೆ ಈಗಿರುವಂತೆ 'ಕೂಡಲಸಂಗಮದೇವ' ಉಳಿಸಿಕೊಂಡರೆ, ಆಗ ಜ್ಞಾನೋದಯ ನಂತರದ ವಚನಗಳಿಗೆ ಲಿಂಗತತ್ವ ಪ್ರತಿಪಾದಿಸುವ "ಲಿಂಗ, ಲಿಂಗಯ್ಯಾ, ಲಿಂಗ- ತಂದೆ, ಲಿಂಗಮೂರ್ತಿ, ಲಿಂಗದೇವಾ" ಎಂದು ಒಂದು ಹೆಸರನ್ನು ವಚನಾಂಕಿತವಾಗಿ ಉಪಯೋಗಿಸಿದಾಗ ಸುಸಂಬದ್ಧತೆ ಕಂಡು ಕೊಳ್ಳುತ್ತದೆ ಮತ್ತು ವಿಶ್ವಗುರುವಿನ ಆಶಯವೂ ನೆರವೇರುತ್ತದೆ.

ಅನೇಕ ಶರಣರು ತಮ್ಮ ವಚನಾಂಕಿತಗಳೊಟ್ಟಿಗೆ "ಲಿಂಗ" ವೆಂಬ ಪದವನ್ನು ಸೇರಿಸಿರುವುದನ್ನು ಕಾಣುತ್ತೇವೆ. ಅಲ್ಲಮ ಪ್ರಭುಗಳು - "ಗುಹೇಶ್ವರ ಲಿಂಗಕ್ಕೆ", ಶರಣ ಆಯ್ದಕ್ಕಿ ಮಾರಯ್ಯ -ಅಮರೇಶ್ವರ ಲಿಂಗ" ಎಂದು ಸಂಬೋಧಿಸಿರುವುದು ಕಾಣಬರುತ್ತದೆ. ಹೀಗೆ ಭೋಗ ಬಂಕೇಶ್ವರ ಲಿಂಗ, ರಾಮೇಶ್ವರ ಲಿಂಗ, ಈಶ್ವರೀಯ ವರದ ಮಹಾಲಿಂಗ, ಅಮುಗೇಶ್ವರ ಲಿಂಗ, ಮುಂತಾದ ವಚನಾಂಕಿತಗಳು ಗಮನಸೆಳೆಯುತ್ತವೆ.

ಈ ಗೊಂದಲ/ ಅಸಂಬದ್ಧತೆಗಳಿಗೆ ಆಸ್ಪದವಾಗದೆ ಇರಲು, ಒಂದು ಮಾರ್ಗ/ಉಪಾಯ ವನ್ನು, ಧರ್ಮಪಿತ ಬಸವಣ್ಣನವರ/ಶರಣರ ಆಶೋತ್ತರಗಳಿಗೆ ಅನುಗುಣವಾಗಿ, ಕಂಡುಹಿಡಿದು ನಾವು ಸ್ಪಂದಿಸಲೇಬೇಕು. ಇಲ್ಲವಾದರೆ, ಧರ್ಮ ಸಂಸ್ಥಾಪಕ ಗುರುವಿನ ಮೇರು ವ್ಯಕ್ತಿತ್ವ ಮಸುಕಾದಂತೆ ಇನ್ನಿತರರೂ ಭಾವಿಸಿಯಾರು?

ಲಿಂಗ = GOD

ಶರಣರ ಅರ್ಥದ ದೇವರ ಕಲ್ಪನೆಯನ್ನು ವಚನ 5 ರಲ್ಲಿ ಗಮನಿಸಿದ್ದೇವೆ. ಬಹುಶಃ ಕ್ರೈಸ್ತರು, ಮುಸಲ್ಮಾನರು ಮತ್ತು ಇತ್ತೀಚಿಗೆ ಬೆಳಕು ಕಂಡಿರುವ ಬ್ರಹ್ಮಕುಮಾರಿಯರ ಪಂಥದಲ್ಲೂ ದೇವರ ಕಲ್ಪನೆ, ವಿಶ್ವಗುರು ಬಸವಣ್ಣನವರು ಪರಿಚಯಿಸಿದ ದೇವರ ಕಲ್ಪನೆಗಿಂತಲೂ ಭಿನ್ನವಾಗಿದೆ. ಈ ಧರ್ಮೀಯರ ದೇವರು ನಿರಾಕಾರನಾಗಿದ್ದರೂ - ಸೃಷ್ಟಿಯನ್ನು ಮಾಡಿ, ತಾನು ಬೇರೆ

ಇನ್ನೊಂದು ಲೋಕದಲ್ಲಿ ವಾಸವಾಗಿದ್ದಾನೆ (Deism). ಅದಕ್ಕಾಗಿ ಅವರಲ್ಲಿ ಸ್ವರ್ಗ ನರಕಗಳ ಪರಿಕಲ್ಪನೆ ದಟ್ಟವಾಗಿ ಬೆಳೆದಿದೆ. ಮೂಲದಲ್ಲಿ ವೇದ – ದೇವರೊಬ್ಬನೆ ಎಂದರೂ ಸ್ವರ್ಗ ನರಕಗಳ ಪರಿಕಲ್ಪನೆಯಿಂದಾಗಿ, ದೇವರು ದೇವತೆಗಳಾಗಿ ಬೇರೆ ಲೋಕದಲ್ಲಿ ವಾಸ ಮಾಡುವಂತಾಯಿತು. ಆದರೆ, ಲಿಂಗಾಯತ ಧರ್ಮದ ದೇವರು ನಿರಾಕಾರನಾಗಿದ್ದು, ವಿಶ್ವಾತ್ಮನಾಗಿ ಸೃಷ್ಟಿಯನ್ನು ಗೈದು, ತಾನೆ ಸೃಷ್ಟಿಯ ತುಂಬಾ ಓತಪ್ರೋತವಾಗಿ ತುಂಬಿ ತುಳುಕುತ್ತಾ ವ್ಯಾಪಿಸಿದ್ದಾನೆ (Theism). ಅಂಥ ದೇವನಿಗೆ ಧರ್ಮಪಿತರು ಮತ್ತು ಶರಣರು ಭಕ್ತಿಯಿಂದ ಅಭಿಮಾನದಿಂದ "ಲಿಂಗ, ಲಿಂಗಯ್ಯಾ, ಲಿಂಗತಂದೆ, ಲಿಂಗಮೂರ್ತಿ, ಲಿಂಗದೇವಾ" ಎಂದು ಸಂಬೋಧಿಸಿ, ಕರೆದು ಕೃತಾರ್ಥರಾಗಿದ್ದಾರೆ ಎಂಬುದನ್ನು ಕೆಳಗಿನ ವಚನಗಳ ಮೂಲಕ ತಿಳಿಯಬಹುದಾಗಿರುತ್ತದೆ.

ಉದಾ. :

1) ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ...
(ಮೇಲಿನ ವಚನ 5ರ– 4ನೇಸಾಲು)

2) ಸರ್ವಗುಣ ಸಂಪನ್ನ ಲಿಂಗವೆ, ನೀನೆನ್ನಲ್ಲಿ ಅವಗುಣವನರಸುವರೆ ....
(67 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

3) ನಿಜವನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೆ ....
(113 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

4) ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು ನಂಬುಗೆಯುಳ್ಳಡೆ ....
(186 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

5) ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ ....
(187 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

6) ಎಂತೋ ಲಿಂಗತಂದೆ, ಎಂತಯ್ಯಾ ಎನ್ನ ಪೂರ್ವ ಲಿಖಿತ...............................
(271 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

7) ಭಕ್ತಿದಾಯಕ ನೀನು ಕರುಣಿಸು ಲಿಂಗತಂದೆ...
(484 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

8) ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ, ಲಿಂಗ ತಂದೆ...............................
(50 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

9) ಲಿಂಗದೇವನಿಲ್ಲದ ತಾವು ನರವಿಂಧ್ಯ, ಹೋಗಲಾಗದು. ....
(87 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

10) ಲಿಂಗದೇವನ ಪೂಜಿಸಿ ಕುಲವನರಸುವರೆ, ಅಯ್ಯಾ ? ....
(138 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

ಹೀಗೆ, "ಲಿಂಗ" ಎನ್ನುವ ದೇವ ಶಬ್ದ ಶರಣರಿಗೆ ಅತ್ಯಂತ ಪ್ರೀತಿ ಪಾತ್ರದ್ದು. ಆ ಏಕೈಕ ನಿರಾಕಾರ ದೇವನು " ಲಯ ಗಮನ ಶೂನ್ಯ " ಮಾಡಿಕೊಂಡಿದ್ದಕ್ಕಾಗಿ ದೇವನ ಕರ್ತೃತ್ವ ಶಕ್ತಿ ನಮ್ಮ ಅರಿವಿಗೆ ಬರುವುದು. ಇಂಗ್ಲೀಷ್ ಭಾಷೆಯ "GOD" ನ್ನು ಅವಲೋಕಿಸಿದಾಗ, G - that which Generates ಯಾವುದರಿಂದ ಹೊರಹೊಮ್ಮಿ ಎಂತಲೂ, O - that which Operates ಯಾವುದು ಚಲನಶಕ್ತಿಗೆ ನೀಡುತ್ತೋ, D - that which Dissolves / Destroys/ Transforms ಅಂದರೆ ಯಾವುದರಲ್ಲಿ ಹೊರಹೊಮ್ಮಿ ಲೀನವಾಗುತ್ತೋ ಅಂತಹುದನ್ನು GOD - ಎಂದು ಅರ್ಥೈಸಿರುವುದನ್ನು ನಾವು ಕಾಣುತ್ತೇವೆ. ಭಾರತೀಯ ಪರಂಪರೆಯಲ್ಲಿ, GODಗಿಂತಲೂ ಮೊದಲೇ ಚಾಲ್ತಿಯಲ್ಲಿರುವ – ಇದು "ಲಿಂಗ" ಎನ್ನಿಸಿಕೊಂಡಿದೆ ಎಂದು ಹೆಮ್ಮೆಯಿಂದ ಗಮನಿಸಬಹುದು !

"ಕೂಡಲಸಂಗಮ ದೇವ " ವಚನಾಂಕಿತವನ್ನು ಅವಲೋಕಿಸಿದಾಗ 'ಕೂಡಲ ಸಂಗಮ' ಮತ್ತು 'ದೇವ' ಎಂದು ಗೋಚರಿಸುತ್ತದೆ. 'ಕೂಡಲಸಂಗಮ' ಬದಲಾಗಿ ವಿಶ್ವಗುರು ಬಸವಣ್ಣನವರ ಕಲ್ಪನೆಯ "ಲಿಂಗ"ವನ್ನು ಇರಿಸಿ, 'ದೇವ' ಎನ್ನುವ ಪದವನ್ನು ಹಾಗೇ ಇಡಲಾಗಿ – ನಮಗೆ " ಲಿಂಗದೇವ " ನ ದಿವ್ಯ ದರ್ಶನವಾಗುತ್ತದೆ. ಈ ರೀತಿಯಲ್ಲಿ ವಿಶ್ವಗುರು ಬಸವಣ್ಣನವರು ತಾವು ರಚಿಸಿದ ವಚನಗಳಲ್ಲಿ 5 ಸ್ಥಳಗಳಲ್ಲಿ ಈ 'ಲಿಂಗದೇವ' ಪದ ಪ್ರಯೋಗ ಮಾಡಿರುವುದನ್ನು ಕಾಣುತ್ತೇವೆ.

1) ಲಿಂಗದೇವನಿಲ್ಲದ ತಾವು ನರವಿಂಧ್ಯ ಹೋಗಲಾಗದು. ....
(87 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

2) ಲಿಂಗದೇವನ ಪೂಜಿಸಿ ಕುಲವನರಸುವರೆ, ಅಯ್ಯಾ ? ....
(138 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

3) ಲಿಂಗದೇವನ ಮುಟ್ಟಿ ಮಜ್ಜನಕ್ಕೆರೆವ ಕೈಯಲು.......................................
(593 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

4) ಲಿಂಗದೇವನೆ ದಿವ್ಯವೋ ಅಯ್ಯಾ..
(646 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

5) ಲಿಂಗದೇವನ ಧ್ಯಾನವೆಂದಡೆ ಕರಗಿ ಕೊರಗದೆನ್ನ ಮನ..........................
(1329 ನೆ ವ. – ಬ.ವ.ಸಂ. ಸರ್ಕಾರಿ ಪ್ರಕಟಣೆ 1993)

ಆದಕಾರಣ, ವಿಶ್ವಗುರು ಬಸವಣ್ಣನವರು,– ಮೊದಲಿಗೆ ದೇವತೆಗಳು, ನಂತರ ಏಕ ದೇವತಾ ಶಿವ ಮತ್ತು ಅತ್ಯುನ್ನತ ಮಟ್ಟದ ಅನುಭಾವಿಯಾಗಿ ತಮ್ಮ ನಿರಾಕಾರ ಅರ್ಥದ ದೇವನ ಬಗ್ಗೆ ಹಂತ ಹಂತವಾಗಿ ಪರಿವರ್ತನೆ ಹೊಂದಿರುವುದು ಇದರಿಂದ ಕಾಣಬರುತ್ತದೆ. ಹೀಗೆ, ಗುರು ಬಸವಣ್ಣನವರು ತಾವು ರಚಿಸಿದ ಮೊದಲ ಎರಡು ಹಂತದ ವಚನಗಳಿಗೆ ತಮ್ಮ ಅಂದಿನ ಆರಾಧ್ಯ ದೈವ " ಕೂಡಲಸಂಗಮ ದೇವ" ವಚನಾಂಕಿತವ ಮುಂದುವರಿಸಿ, ತಮ್ಮ ಜ್ಞಾನೋದಯವಾಗಿ ದೇವರಿಂದ ಅನುಗ್ರಹಿತರಾದ ಮೇಲೆ ಬರೆದ ವಚನಗಳಿಗೆ, ಏಕೈಕ ನಿರಾಕಾರ ದೇವನ ಅರ್ಥದ " ಲಿಂಗದೇವ "ನನ್ನು ಉದ್ದೇಶಿಸಿ ಹೇಳಿದರೆಂಬುವುದು ಸುಸಂಬದ್ಧವಾಗುತ್ತದೆ. ಅನೇಕ ತೊಂದರೆಗಳು ಇದರಿಂದ ನಿವಾರಣೆ ಆಗುತ್ತವೆ. ಇದು ಒಂದು ಸುಸಂಬದ್ಧ ಕ್ರಮವಾಗಿ ನಾವು ಅರ್ಥೈಸುವುದು ಅತ್ಯಂತ ಅವಶ್ಯಕ.

ಈ ರೀತಿ, ಹಿರಿಯ ಅನುಭಾವಿ ಶರಣರಾದ ಹರ್ಡೇಕರ್ ಮಂಜಪ್ಪನವರು ಬಹು ಹಿಂದೆ, ತಾವು ರಚಿಸಿದ "ಬಸವ ಬೋಧಾಮೃತ" ಎಂಬ ಪುಸ್ತಕದಲ್ಲಿ – 'ಮಹಾನುಭಾವರಾದ ಶ್ರೀ ಬಸವಣ್ಣನವರ 108 ವಚನ'ಗಳಿಗೆ ವಿಶ್ಲೇಷಣೆ ಬರೆಯುತ್ತಾ, ಅನೇಕ ಸ್ಥಳಗಳಲ್ಲಿ 'ಕೂಡಲಸಂಗಮ ದೇವ' ಕ್ಕೆ ಬದಲಾಗಿ "ಲಿಂಗದೇವ" ಎಂದು ಹೇಳಿರುವುದನ್ನು ಕಾಣುತ್ತೇವೆ.

ಇದನ್ನೆ, ಪೂಜ್ಯ ಮಾತಾಜಿಯವರು ವಿವೇಚನೆಯ ಒರೆಗೆ ಹಚ್ಚಿ , ಬಸವ ಜ್ಞಾನದ ಮೆರುಗನ್ನು ನೀಡಿ, 'ಲಿಂಗದೇವ'ನ ಬೆಳಕನ್ನು ತುಂಬಿ ಪಸರಿಸಿ – ಧರ್ಮಪಿತರ ಮನಸಾಂತರದ ಪರಿವರ್ತನೆಗೆ ಸಾಣೆಯಿಟ್ಟು, ಬಸವಗುರುವಿನ ಪ್ರೌಢತೆಯ (ಜ್ಞಾನೋದಯ ಪೂರ್ವದ ಸನ್ನಿವೇಶದ)ವರೆಗೆ 'ಕೂಡಲಸಂಗಮ ದೇವ' ವಚನಾಂಕಿತ ಉ/ಬಳಸಿ, ನಂತರ – ಉನ್ನತ ಮಟ್ಟದ ಅನುಭಾವಪೂರ್ಣ ವಿಶ್ವ ವಿಸ್ತಾರವಾದ – ವಿಶ್ವಗುರು ಬಸವಣ್ಣನವರೆ ಸಂಬೋಧಿಸಿದ ವಿಶೇಷ "ಲಿಂಗದೇವ"ನು ಪ್ರಕಟಗೊಂಡಿರುವುದು.

ಇದನ್ನು ಗಮನಿಸಿದಾಗ, ಪೂಜ್ಯ ಮಾತಾಜಿಯವರ ಈ ಚಿಂತನೆ, ಸಂಶೋಧನೆ ಅಮೋಘ ಮತ್ತು ಅಭೂತ ಪೂರ್ವ ಎಂದು ಕೃತಜ್ಞತೆ ಸಲ್ಲಿಸದಿದ್ದರೆ, ಅಪ್ರಾಮಾಣಿಕರು ನಾವು ಎಂದೆನ್ನಿಸದಿರದು.

" ಓಂ ಶ್ರೀ ಗುರು ಬಸವಲಿಂಗಾಯ ನಮಃ"

ಮಹಾ ಮಂತ್ರ " ಓಂ ಶ್ರೀ ಗುರು ಬಸವಲಿಂಗಾಯ ನಮಃ " ವನ್ನು ಗಮನಿಸಿದಾಗ, ಎರಡು ಭಾಗಗಳಾಗಿ ವಿಂಗಡಿಸಬಹುದು. ಮೊದಲ ಭಾಗ – ಗುರು ಮಂತ್ರ "ಓಂ ಶ್ರೀ ಗುರು ಬಸವ" ಎಂದು ಮತ್ತು ಇನ್ನೊಂದು, ದೇವ ಮಂತ್ರ "ಲಿಂಗಾಯ ನಮಃ" ಎಂದು. "ಲಿಂಗ"ಕ್ಕೆ ಬಸವಣ್ಣನವರ ಹೆಸರು ವಿಶೇಷಣವಾಗಿರುವುದನ್ನು ಕಾಣುತ್ತೇವೆ. ಇದರ ವಿಶ್ಲೇಷಣೆ ಅಂದರೆ, 'ಬಸವಣ್ಣನವರ ಲಿಂಗದೇವ' ಎಂದು. ಇನ್ನಿತರ ಆಧ್ಯಾತ್ಮಿಕ ಜೀವಿಗಳಿಗೆ ತಮ್ಮ ಅರ್ಥದ ದೇವರ ಕಲ್ಪನೆಯೆ ಬೇರೆಯಾಗಿದೆ. ಆದರೆ, ವಿಶ್ವಗುರು ಬಸವಣ್ಣನವರ ದೇವರು"ಲಿಂಗ" (ನಿರಾಕಾರನಾಗಿ)ವಾಗಿ, ವಿಶ್ವದಾದ್ಯಂತ ಓತಪ್ರೋತವಾಗಿ ತುಂಬಿ ತುಳುಕುತ್ತಿದ್ದಾನೆ. ಒಟ್ಟಾರೆ, ಈ ಮಹಾ ಮಂತ್ರದ ಅರ್ಥವೆಂದರೆ,"ಗುರು ಬಸವಣ್ಣನವರಿಗೂ, ಅವರು ಪರಿಚಯಿಸಿದ ಓಂಕಾರ ಸ್ವರೂಪಿ ಲಿಂಗ(ದೇವ)ನಿಗೂ ಶರಣುಗಳು/ನಮಸ್ಕಾರಗಳು"ಎಂದು.

ಇದರಿಂದ, ನಮಗೆ ತಿಳಿದುಬರುವ ವಿಚಾರವೆಂದರೆ, " ಓಂ ಲಿಂಗಾಯ ನಮಃ" ಎನ್ನುವ ದೇವ ಮಂತ್ರದ ಪರಿಚಯ. ಹಾಗೆಯೆ, ಗುರು, ಲಿಂಗ ಸೇರಿರುವ ಮಹಾ ಮಂತ್ರವೆ " ಓಂ ಶ್ರೀ ಗುರು ಬಸವಲಿಂಗಾಯ ನಮಃ". ಇದು ಧರ್ಮಗುರು ಬಸವಣ್ಣನವರ ಜೀವಿತ ಕಾಲದಲ್ಲಿ, ಅವರ ಅನುಯಾಯಿಗಳು ಭಕ್ತಿ, ಕೃತಜ್ಞತೆಯಿಂದ ರೂಪಿಸಿರುವುದನ್ನು ಕಾಣುತ್ತೇವೆ.

ಇನ್ನೊಂದು ಅರ್ಥದಲ್ಲಿ, ಧರ್ಮಪಿತ ಬಸವಣ್ಣನವರು ತಾಯಿಯಾಗಿ, ನಮ್ಮೆಲ್ಲರ ತಂದೆಯಾದ ಸೃಷ್ಟಿಕರ್ತ ಲಿಂಗದೇವರಿಗೆ ಶರಣು ಗೈಯುವೆವು – ಎಂದು (ತಾಯಿಯೆ ತಂದೆಯನ್ನು ತೋರಿಸಿದಂತೆ).

ಆದರೆ, ಅನೇಕ ಬಸವ ಭಕ್ತರೆಂದು ಕರೆಸಿಕೊಳ್ಳುವವರಲ್ಲಿ ಒಂದು ಆಭಾಸವನ್ನು ಗುರ್ತಿಸಿದ್ದೇನೆ. ಅವರು ಹೇಳುವ ಮಂತ್ರ "ಓಂ ಶ್ರೀ ಗುರು ಬಸವಲಿಂಗಾಯ ನಮಃ" ಆದರೆ ಇಷ್ಟಲಿಂಗ ಪೂಜೆಯಲ್ಲಿ, 'ಓಂ ನಮಃ ಶಿವಾಯ' ಎಂದು 'ಇಷ್ಟಲಿಂಗಕ್ಕೆ' ಸಂಬೋಧಿಸುವುದು ಸರಿಯೆ? ಇಷ್ಟಲಿಂಗ ನಿರಾಕಾರ ದೇವನ ಕುರುಹು. ನಿರಾಕಾರ ತತ್ವದ ಇಷ್ಟಲಿಂಗದ ಮುಂದೆ, ಸಾಕಾರ ರೂಪಿ ಶಿವನನ್ನು ನೆನೆಯುವುದು ಆಭಾಸವಲ್ಲದೆ ಮತ್ತಿನ್ನೇನು? ಇದನ್ನು ಮೇಲಿನ ಚಿಂತನೆಯ ಮೂಸೆಯಲ್ಲಿ ಪರಾಮರ್ಶಿಸಿದಾಗ "ಓಂ ಲಿಂಗಾಯ ನಮಃ" (ಷಡಕ್ಷರಿ) ಅಥವಾ, ಇನ್ನೂ ಅರ್ಥಗರ್ಭಿತವಾಗಿ " ಓಂ ಶ್ರೀ ಲಿಂಗದೇವಾಯ ನಮಃ" (ನವಾಕ್ಷರಿ) ಎನ್ನುವುದೇ ಸೂಕ್ತವಾದದ್ದು. ಇದನ್ನು ವಿಚಾರವಾದಿಗಳಾದ ಬಸವಭಕ್ತರು ಆಚರಣೆಗೆ ತರುವುದು ಅವರ ಮೇಲೆ ಇರುವ – ನಿರಾಕರಿಸಲಾಗದ ಜವಾಬ್ದಾರಿ.

ನಮ್ಮ ಸಮಾಜದಲ್ಲಿ, 'ಬಸವ ಜಯಂತಿ' ಆಚರಿಸುತ್ತಾರೆ. ಅವರ ಲಿಂಗೈಕ್ಯ ಸಂಸ್ಮರಣೆಯನ್ನು ಈಗೀಗ ಅಲ್ಲಿ ಇಲ್ಲಿ ಆಚರಿಸುತ್ತಿದ್ದಾರೆ. ಆದರೆ, ಅವರ ಬಹು ದೊಡ್ಡ ಕೊಡುಗೆಯಾದ 'ಇಷ್ಟಲಿಂಗ'ವನ್ನು ಜಗತ್ತಿಗೆ ಕೊಟ್ಟ ದಿನ – ಜನವರಿ 14ರ ಸಂಕ್ರಾಂತಿಯೇ– ಬಸವ ಕ್ರಾಂತಿ ದಿನವೆಂದು (ಸಿಂಗಿರಾಜನ ಕಾವ್ಯ), ಬಸವ ಧರ್ಮ ಪೀಠವು "ಶರಣ ಮೇಳ" ವನ್ನು ಜಾಗತಿಕ ಸಮಾವೇಶವಾಗಿ ಆಚರಿಸುವುದನ್ನು ಬಿಟ್ಟರೆ ಮತ್ತಾರೂ ಆಚರಿಸುತ್ತಿಲ್ಲ! ಇದು ಸಮಾಜದಲ್ಲಿರುವ ಸ್ವಾಮೀಜಿಗಳಿಗಾಗಲಿ, ಪ್ರಬುದ್ಧರಿಗಾಗಲಿ, ಅನುಯಾಯಿಗಳಿಗಾಗಲಿ ಶೋಭೆ ತರುವ ವಿಷಯವಲ್ಲ. ಈಗಲಾದರೂ ಎಚ್ಚೆತ್ತು ಆಚರಿಸಿದರೆ ಬಸವಗುರುವಿಗೆ ಈ ಸಮಾಜ ಸಲ್ಲಿಸುವ ಬಹು ದೊಡ್ಡ ಕೃತಜ್ಞತೆಯನ್ನುವುದನ್ನು ಮರೆಯದಿರೋಣ.

ಈ ಎಲ್ಲಾ ಸಂಶೋಧನೆಗೆ, ಚಿಂತನೆಗೆ ಕಾರಣ ಕರ್ತೃಗಳಾದ "ಬಸವಾತ್ಮಜೆ" ಕಾವ್ಯನಾಮದ ಪೂಜ್ಯಶ್ರೀ ಮಹಾ ಜಗದ್ಗುರು ಡಾ. ಮಾತೆ ಮಹಾದೇವಿ ತಾಯಿಯವರನ್ನು ಅಭಿನಂದಿಸಿ, ಇಡೀ ಸಮಾಜ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು.

ಶರಣ ಮೇಳ-2014

ಬಸವ ಭಕ್ತರ ಪ್ರತಿಜ್ಞೆ

ಬಸವ ಭಕ್ತರು ನಾವು ಬಸವ ಭಕ್ತರು
ತತ್ವನಿಷ್ಠರು ನಾವು ತತ್ವನಿಷ್ಠರು || ಪ ||
"ಧರ್ಮಗುರು ಬಸವಣ್ಣ" ಎಂದು ಸಾರಿ ನುಡಿವೆವು
"ವಚನ ಶಾಸ್ತ್ರ ಸಂವಿಧಾನ" ಎಂದು ತಿಳಿದು ನಡೆವೆವು
"ಇಷ್ಟಲಿಂಗ ದೇವ ಕುರುಹು" ಎಂದು ಧರಿಸಿ ಪೂಜಿಪೆವು
"ಸಂಗಮವು ಧರ್ಮ ಕ್ಷೇತ್ರ" ಎಂದು ತಿಳಿದು ಬರುವೆವು ||
"ಷಟ್ಕೋನ ಬಸವ ಧ್ವಜವ" ಹಿಗ್ಗಿನಿಂದ ಹಾರಿಪೆವು
"ದಿವ್ಯ ಗಣಲಿಂಗದ ದರ್ಶನ"ವ ಪಡೆವೆವು
"ಶರಣ ಮೇಳ"ದಲ್ಲಿ ಕೂಡಿ, ಹಾಡಿ ಪಾಡಿ ನಲಿವೆವು
"ಕಲ್ಯಾಣ ಪರ್ವಕೆ "ಬಂದು ಜನ್ಮಧನ್ಯ ಗೈವೆವು ||
"ಅಷ್ಟಾವರಣ ಅಂಗ"ವೆಂದು ನಾವು ನಿತ್ಯ ಧರಿಪೆವು
"ಷಡಾಚಾರ" ಪ್ರಾಣವೆಂದು ಅನುಷ್ಠಾನ ಗೈವೆವು
"ಷಟಸ್ಥಲ" ಶಿವಪಥದಿ ಶ್ರದ್ಧೆಯಿಂದ ಸಾಗುವೆವು
ಗುರುಬಸವ ತಂದೆಯು ಮೆಚ್ಚುವಂತೆ ಬಾಳುವೆವು ||
ಜಾತಿವಾದ ಮನುಜಗೈದ ತಂತ್ರವೆಂದು ಸಾರುವೆವು
ನೀತಿ ಸಿರಿಯು ಒಂದೆ ಶ್ರೇಷ್ಠ ಸೂತ್ರವೆಂದು ತಿಳಿವೆವು
ದೇವನೊಬ್ಬ ನಮ್ಮ ತಂದೆ ಮನುಜರೆಲ್ಲರೊಂದೆ ಎಂದು
ವಿಶ್ವಸೋದರತ್ವ ಸಾರಿ ಕಲ್ಯಾಣ ರಾಜ್ಯ ಕಟ್ಟುವೆವು ||

ಲಿಂಗಾಯತ ನಾನು ಲಿಂಗಾಯತ

ಲಿಂಗಾಯತ ನಾನು ಲಿಂಗಾಯತ
ವಿಶ್ವಬಂಧುವು ನಾನು ವಿಶ್ವಬಂಧುವು || ಪ ||
ನನ್ನ ಧರ್ಮ ಲಿಂಗಾಯತ ಎಂದು ಸಾರಿ ನುಡಿವೆನು
ಬಸವಣ್ಣನೆ ಧರ್ಮಗುರುವು ಎಂದು ನಂಬಿ ನಡೆವೆನು
ಲಿಂಗದೇವ ಜಗದ ಕರ್ತ ಎಂಬ ಶ್ರದ್ಧೆ ಹೊಂದುತ
ವಚನ ಶಾಸ್ತ್ರ ನಮ್ಮ ನಡೆಗೆ ಧರ್ಮಸೂತ್ರವೆಂಬೆನು || 1 ||
ಇಷ್ಟಲಿಂಗ ದೇವಕುರುಹು ಎಂದು ಧರಿಸಿ, ಪೂಜಿಪೆನು
ಸಂಗಮವು ಧರ್ಮಕ್ಷೇತ್ರ ಎಂದು ತಿಳಿದು ಬರುವೆನು
ಶರಣ ಮೇಳದಲ್ಲಿ ಕೂಡಿ ಹಾಡಿ ಪಾಡಿ ನಲಿವೆನು
ಕಲ್ಯಾಣ ಪರ್ವಕೆ ಬಂದು ಜನ್ಮ ಧನ್ಯ ಗೈವೆನು || 2 ||
ಷಟ್‌ಕೋನ ಬಸವ ಧ್ವಜವ ಹಿಗ್ಗಿನಿಂದ ಹಾರಿಪೆನು
ಇಷ್ಟಲಿಂಗ ದೀಕ್ಷೆ ಹೊಂದಿ ಗಣಪದವಿಯ ಹೊಂದುವೆನು
ಭಕ್ತಿಪಕ್ಷ ಹೊಂದಲಿಕ್ಕೆ ಬಸವ ಮಂಟಪ ಕಟ್ಟುವೆನು
ವಾರಕ್ಕೊಮ್ಮೆ ಸಾಮೂಹಿಕ ಪ್ರಾರ್ಥನೆಯ ಗೈವೆನು || 3 ||
ಶ್ರಾವಣ ಮಾಸದಲ್ಲಿ ನಾನು ವಚನ ಪಠಣಗೈವೆನು
ಶರಣ ಭಾಷೆ ಕನ್ನಡವೆಂದು ಹೆಮ್ಮೆಯಿಂದ ನುಡಿವೆನು
ಬಸವಾದಿ ಶರಣರ ಪರಂಪರೆಯು ನನ್ನದು
ಜಾತಿವರ್ಣವರ್ಗಾತೀತ ಸಹೋದರತೆ ನಮ್ಮದು || 4 ||
ಮರ್ತ್ಯಲೋಕ ಕರ್ತಾರನ ಕಮ್ಮಟವೆಂದೆನ್ನುತ
ದಿವ್ಯ ಗಣಲಿಂಗವು ಬೆಸೆವ ಕುರುಹು ಎಂಬೆನು
ಜಾತಿ ಸೂತ್ರ ತೊರೆದು ನಾನು ನೀತಿ ಸೂತ್ರ ಹಿಡಿವೆನು
ವಿಶ್ವಸೋದರತ್ವ ಸಾರಿ ಕಲ್ಯಾಣರಾಜ್ಯ ಕಟ್ಟುವೆನು || 5 ||

ಕಲ್ಯಾಣದ ಜ್ಯೋತಿ

ಜ್ಯೋತಿ ಬೆಳಗುತಿದೆ ಕಲ್ಯಾಣದ ಜ್ಯೋತಿ ಬೆಳಗುತಿದೆ || ಪ ||
ಮನುಕುಲದ ಲೇಸನು ಬಯಸಿದ ಬಸವ ಗುರು
ಕಲ್ಯಾಣ ಪುರದೊಳು ಅಂದು ಹೊತ್ತಿಸಿದ || ಅ. ಪ ||
ಕಲ್ಯಾಣವೆ ಪ್ರಣತೆಯಾಗಿ ಅದರೊಳು
ಭಕ್ತಿರಸವೆ ತೈಲವಾಗಿ
ಸದಾಚಾರದ ಬತ್ತಿ ಹಿಡಿದು ಬಸವಣ್ಣನೆಂಬ ಜ್ಯೋತಿ
ಮುಟ್ಟಲು ಪರಮ ಪ್ರಕಾಶವ ಚೆಲ್ಲವರಿದು ||1||
ಅಲ್ಲಮ ಪ್ರಭುದೇವ ಸುಜ್ಞಾನಿ
ಶ್ರೀ ಚನ್ನಬಸವಣ್ಣ
ವೀರವಿರಾಗಿಣಿ ಶ್ರೀ ಅಕ್ಕಮಹಾದೇವಿ
ಗುಡ್ಡಾಪುರ ದಾನಮ್ಮ ಸತ್ಯಕ್ಕ ಹಚ್ಚಿದ ||2||
ಶ್ರೀ ಸಿದ್ಧರಾಮೇಶ್ವರ ಮಡಿವಾಳ
ಮಾಚಯ್ಯ ಕೇತಯ್ಯ
ಹರಳಯ್ಯ-ಮಧುವಯ್ಯ ಅಂಬಿಗರ ಚೌಡಯ್ಯ
ಒಕ್ಕಲಿಗ ಮುದ್ದಣ್ಣ ಅಮುಗಯ್ಯ ಹಚ್ಚಿದ ||3 ||
ನೀಲಮ್ಮ ನಾಗಮ್ಮ ಮುಕ್ತಾಯಿ
ಶರಣೆ ಕಲ್ಯಾಣಮ್ಮ
ಅನುಭವ ಮಂಟಪದಿ ಲಿಂಗದೇವನ ನೆನೆದು
ಹಡಪದ ಅಪ್ಪಣ್ಣ ಲಿಂಗಮ್ಮ ಹಚ್ಚಿದ || 4 ||
ಮೋಳಿಗೆ ಮಾರಯ್ಯ ಆತನ ಸತಿ
ಜ್ಞಾನಿ ಗಂಗಾದೇವಿ
ಆಯ್ದಕ್ಕಿ ಮಾರಯ್ಯ ಲಕ್ಕಮ್ಮ ಸತ್ಯಕ್ಕ
ಜೇಡರ ದಾಸಯ್ಯ ದುಗ್ಗಲೆ ಹಚ್ಚಿದ || 5 ||
ಸದ್ಗುರು ಲಿಂಗಾನಂದರ ಸಂಕಲ್ಪದಿಂ
ಬಸವಾತ್ಮಜೆ ಮಾತೆಯು
ಕಾಯಕ ದಿನದಂದು ಕಲ್ಯಾಣ ಪರ್ವದಿ
ಸಚ್ಚಿದಾನಂದನ ಶರಣರ ಕೂಡಿಸಲು || 6 ||

–ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ



" ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ಸಂಗನ ಬಸವಣ್ಣ ಕಲ್ಯಾಣದಲ್ಲಿ
ಮಹಾಮನೆಯ ಕಟ್ಟಿದಡೆ ಮರ್ತ್ಯಲೋಕವೆಲ್ಲವೂ
ಭಕ್ತಿ ಸಾಮ್ರಾಜ್ಯವಾಯಿತು "



Registerd NO/KA/BGW/50/2012-2014, RNI 19980/70, POSTED AT MBC BANGALORE GPO ON 3rd,10th,20th, OF EVERY MONTH. LICENCED TO POST WITHOUT PRE PAYMENT WPP-17, PAGES 32+4 (COVER PAGES)